ಹುಬ್ಬಳ್ಳಿ–ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ, ಕೊಪ್ಪಳ, ವಿಜಯನಗರ, ಬೆಳಗಾವಿ, ದಾವಣಗೆರೆ, ರಾಯಚೂರ, ಯಾದಗಿರಿ

ಪಬ್ಲಿಕ್ ಫಾಸ್ಟ್ 31

PUBLIC FAST

ಕನ್ನಡ ದಿನಪತ್ರಿಕೆ

ಧ್ವನಿ ನಿಮ್ಮದು ಸಹಾಯ ನಮ್ಮದು... DAILY NEWS PAPER

E-mail : publicfast31@gmail.com

ಸಂಪಾದಕರು : ಐಶ್ವರ್ಯ ಪಿ. ಉಪ ಸಂಪಾದಕರು : ಇಮ್ರಾನ್ ಹೆಬ್ಬಳ್ಳಿ

● ಸಂಪುಟ : 01 ● ಸಂಚಿಕೆ : 138 ● ದಿನಾಂಕ : 09–10–2026 ಶುಕ್ರವಾರ KNKAN/26/A2600 ಪುಟ : 4 ಬೆಲೆ : ರೂ. 2 Mobile : 9916890865

ಎಸ್‌ಐಆರ್ ಹೋರಾಟದ ಕಿಚ್ಚು

ಬೆಂಗಳೂರು: ದೇಶದಲ್ಲಿ ಕಾಕ್ರೋಚ್ ಜನತಾ ಪಕ್ಷದ ಪ್ರತಿಭಟನೆಗಳು ಬಿರುಸಾಗಿದ್ದು, ದೆಹಲಿ ನಂತರ ಕಾಕ್ರೋಚ್ ಜನತಾ ಪಕ್ಷ ಬೆಂಗಳೂರಿನಲ್ಲಿಂದು ಕೇಂದ್ರ ಚುನಾವಣಾ ಮುಖ್ಯ ಆಯುಕ್ತರ ರಾಜೀನಾಮೆಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಿತು.

ಬೆಂಗಳೂರಿನ ಸ್ವತಂತ್ರ ಉದ್ಯಾನವನದಲ್ಲಿ ಜನತಾ ನ್ಯಾಯಾಲಯ ಹೆಸರಿನಲ್ಲಿ ಸಿಜೆಪಿ ನೇತೃತ್ವದಲ್ಲಿ ಈ ಬೃಹತ್ ಪ್ರತಿಭಟನೆ ನಡೆದಿದೆ.

ದೇಶದಲ್ಲಿ ನಡೆದಿರುವ ಎಸ್‌ಐಆರ್ ರದ್ದು ಪಡಿಸಬೇಕು. ಎಸ್‌ಐಆರ್ ಅಕ್ರಮ ಆರೋಪ ಹೊತ್ತಿರುವ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಸಿಜೆಪಿ ಈ ಪ್ರತಿಭಟನೆ ನಡೆಸಿತು.

ಎರಡು ದಿನಗಳ ಹಿಂದೆಯಷ್ಟೇ ದೆಹಲಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಿದ್ದ ಸಿಜೆಪಿ ಈಗ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸುವ ಮೂಲಕ ದೇಶಾದ್ಯಂತ ಸಿಇಸಿ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಲು ಮುಂದಾಗಿದೆ.

ಸಿಜೆಪಿ ನಡೆಸಿರುವ ಈ ಪ್ರತಿಭಟನೆಯಲ್ಲಿ ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪ್ಕೆ, ಸೌರವ್ ದಾಸ್, ಅಸಂತೋಷ್ ರಾಂಕ, ಖ್ಯಾತ ಯೂಟೂಬರ್ ದ್ರುವರಾಟಿ ಇವರುಗಳು ಭಾಗಿಯಾಗಿದ್ದಾರೆ.

ಜನತಾ ನ್ಯಾಯಾಲಯದ ಬ್ಯಾನರ್ ಅಡಿ ನಡೆದಿರುವ ಈ ಪ್ರತಿಭಟನೆಯಲ್ಲಿ ಸಿಜೆಪಿ ನಾಯಕರ ಜತೆ ಖ್ಯಾತ ಚಿತ್ರನಟ ಪ್ರಕಾಶ್‌ರಾಜ್, ದೇವನೂರು ಮಹದೇವ, ಖ್ಯಾತ ಆರ್ಥಿಕ ತಜ್ಞಪರಕಾಲ ಪ್ರಭಾಕರನ್, ಸೇರಿದಂತೆ ಕೆಲವು ನಿವೃತ್ತ ನ್ಯಾಯಾಧೀಶರು ಪಾಲ್ಗೊಂಡಿದ್ದಾರೆ.

ಈ ಪ್ರತಿಭಟನೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಜಸ್ಟಿಸ್ ಗೋಪಾಲಗೌಡರ ಸಮ್ಮುಖದಲ್ಲಿ



ಜನತಾ ನ್ಯಾಯಾಲಯ ಕಾರ್ಯಕ್ರಮವೂ ನಡೆಯಿತು. ಕಾರ್ಯಕ್ರಮದಲ್ಲಿ ಎಸ್‌ಐಆರ್ ಸಂತ್ರಸ್ತರ ಅಹವಾಲು ಆಲಿಕೆಗೂ ವೇದಿಕೆ ಕಲ್ಪಿಸಿ ಅವರ ಅಹವಾಲು ಆಲಿಸಿ ತೀರ್ಪು ನೀಡಿದ್ದು ಎಲ್ಲರ ಗಮನ ಸೆಳೆಯಿತು.

ಹಲವು ಜಿಲ್ಲೆಗಳಿಂದ ಯುವಸಮೂಹ ಆಗಮನ:

ಎಸ್‌ಐಆರ್ ಪ್ರಕ್ರಿಯೆ ವಿರೋಧಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ರಾಜ್ಯದ ಹಲವು ಜಿಲ್ಲೆಗಳಿಂದ ಆಗಮಿಸಿದ ಯುವಕ–ಯುವತಿಯರು ಹಾಗೂ ಎಸ್‌ಆರ್‌ಐನಿಂದ ಮತದಾನದ ಹಕ್ಕು ಕಳೆದುಕೊಂಡಿದ್ದೇವೆ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪ್ಕೆ, ಯೂಟ್ಯೂಬರ್ ಧ್ರುವ ರಾಠಿ ಸೇರಿದಂತೆ ಹಲವು ಗಣ್ಯರು ಆಗಮಿಸುತ್ತಿದ್ದಂತೆ ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗಿದರು.

ಎಸ್‌ಐಆರ್ ರದ್ದತಿಗೆ ಪ್ರಕಾಶ್ ರಾಜ್ ಆಗ್ರಹ:

ಪ್ರತಿಭಟನೆಯಲ್ಲಿ ಮಾತನಾಡಿದ ನಟ ಪ್ರಕಾಶ್ ರಾಜ್, ಇದು ಕೇವಲ ಮತ ಕಳೆದುಕೊಂಡ ವಿಚಾರವಲ್ಲ, ಪ್ರತಿಯೊಬ್ಬ ಪ್ರಜೆಯ ಗೌರವದ ಪ್ರಶ್ನೆಯಾಗಿದೆ. ಚುನಾವಣೆ ಬಂದಾಗ ಮತ ಕೇಳಲು ಜನರ ಮನೆ ಬಾಗಿಲಿಗೆ ರಾಜಕಾರಣಿಗಳು ಬರುತ್ತಾರೆ. ಆದರೆ ಈಗ ಮತದಾರರು ತಮ್ಮ ಮತದಾನದ ಹಕ್ಕನ್ನು ಉಳಿಸಿಕೊಳ್ಳಲು ಕಚೇರಿಗಳ ಸುತ್ತ ಓಡಾಡುವ ಪರಿಸ್ಥಿತಿ ಬಂದಿದೆ. ನಮ್ಮ ಮತವನ್ನು ಅಳಿಸಲು ಇವರು ಯಾರು? ಎಂದು ಪ್ರಶ್ನಿಸಿದರು.

ಎಸ್‌ಐಆರ್‌ನಿಂದ ಕೋಟ್ಯಂತರ ಮತದಾರರ ಮೇಲೆ ಪರಿಣಾಮ ಬೀರಿದೆ. ಬುಡಕಟ್ಟು ಜನರು, ಮುಸ್ಲಿಮರು ಹಾಗೂ ಅಲ್ಪಸಂಖ್ಯಾತರ ಮತಗಳನ್ನು ತೆಗೆದುಹಾಕುವ ಷಡ್ಯಂತ್ರ ನಡೆದಿದೆ ಎಂದು ಆರೋಪಿಸಿದರು.

ನಮಗೆ ಬೇಕಾಗಿರುವುದು ಎಸ್‌ಐಆರ್ ಸಂಪೂರ್ಣ ರದ್ದಾಗಬೇಕು. ಜ್ಞಾನೇಶ್ ಕುಮಾರ್ ವಿರುದ್ಧ ಪ್ರಕರಣ ದಾಖಲಿಸಿ, ಅವರ ಹಿಂದೆ ಯಾರಿದ್ದಾರೆ ಎಂಬುದನ್ನು ತನಿಖೆ ಮೂಲಕ ಹೊರಗೆ ತರಬೇಕು. ಜ್ಞಾನೇಶ್ ಕುಮಾರ್ ಹೋದರೆ ಮತ್ತೊಬ್ಬರು ಬರುತ್ತಾರೆ. ಆದರೆ ನಮ್ಮ ಬೇಡಿಕೆ ವ್ಯಕ್ತಿಯ ಬದಲಾವಣೆ ಮಾತ್ರವಲ್ಲ. ಎಸ್‌ಐಆರ್ ಪ್ರಕ್ರಿಯೆಯೇ ಸಂಪೂರ್ಣ ರದ್ದಾಗಬೇಕು ಎಂದು ಹೇಳಿದರು.

ಇಲ್ಲಿ ಯಾರೂ ಯಾವುದೇ ರಾಜಕೀಯ ಪಕ್ಷದ ಪರವಾಗಿ ಬಂದಿಲ್ಲ. ಇದು ನಮ್ಮ ಹಕ್ಕಿಗಾಗಿ ನಡೆಯುತ್ತಿರುವ ಹೋರಾಟ. ನಾವು ಶಾಂತಿಯುತವಾಗಿ ಹೋರಾಟ ಮುಂದುವರಿಸುತ್ತೇವೆ. ಎಸ್‌ಐಆರ್ ನಿಂದ ಅನ್ಯಾಯವಾಗಿದೆ ಎಂದು ಹೇಳುತ್ತಿರುವ ಮತದಾರರನ್ನು ಭೇಟಿ ಮಾಡಿ ಅವರ ಸಮಸ್ಯೆಗಳನ್ನು ಆಲಿಸಿದ್ದೇವೆ. ಅವರ ಅನುಭವಗಳನ್ನು ಜನರ ಮುಂದಿಡಬೇಕಿದೆ ಎಂದು ಹೇಳಿದರು.

ಇಂದು ನಡೆಯುತ್ತಿರುವ ಹೋರಾಟ ಒಂದು ಸ್ಯಾಂಪಲ್ ಅಷ್ಟೇ. ಎಸ್‌ಐಆರ್ ರದ್ದಾಗುವವರೆಗೆ ಹೋರಾಟ ಮುಂದುವರಿಯಲಿದೆ ಎಂದು ಪ್ರಕಾಶ್ ರಾಜ್ ತಿಳಿಸಿದರು.

ರಾಜೀನಾಮೆಗೆ ಆಗ್ರಹ:

ಸಿಜೆಪಿ ಪಕ್ಷದ ಪ್ರತಿಭಟನೆಯಲ್ಲಿ ಭಾಗಿಯಾಗಿ ಮಾತನಾಡಿದ ಸಿಜೆಪಿ ನಾಯಕರುಗಳು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ರಾಜೀನಾಮೆ ನೀಡಬೇಕು ಹಾಗೂ ಎಸ್‌ಐಆರ್ ರದ್ದುಪಡಿಸಬೇಕು. ಅಲ್ಲಿಯವರೆಗೂ ನಮ್ಮ ಹೋರಾಟ ಮುಂದುವರೆಯುತ್ತದೆ ಎಂದು ಹೇಳಿದರು. ದೆಹಲಿಯಲ್ಲಿ ಈಗಾಗಲೇ ಪ್ರತಿಭಟನೆ ನಡೆಸಿದ್ದೇವೆ. ಬೆಂಗಳೂರಿನಲ್ಲಿ ಇಂದು ಪ್ರತಿಭಟನೆ ನಡೆದಿದೆ. ಮುಂದೆ ದೇಶದ ವಿವಿಧೆಡೆ ಸಿಜೆಪಿ ಪ್ರತಿಭಟನೆ ನಡೆಸಲಿದೆ. ಸಿಇಸಿ ರಾಜೀನಾಮೆ ನೀಡುವವರೆಗೂ ಹೋರಾಟ ನಿಲ್ಲದು ಎಂದು ಘೋಷಿಸಿದರು.

ಬಿಗಿ ಬಂದೋಬಸ್ತ್:

ಸಿಜೆಪಿ ಪಕ್ಷದ ಪ್ರತಿಭಟನೆ ಹಿನ್ನೆಲೆಯಲ್ಲಿ ಫ್ರೀಡಂ ಪಾರ್ಕ್ ಸುತ್ತ ಪೊಲೀಸರು ಬಿಗಿ ಭದ್ರತೆ ಕಲ್ಪಿಸಿದ್ದಾರೆ. ಫ್ರೀಡಂ ಪಾರ್ಕ್‌ನಲ್ಲಿ ಸಿಜೆಪಿ ನಡೆಸಿರುವ ಈ ಪ್ರತಿಭಟನೆಯಲ್ಲಿ ನೂರಾರು ಯುವಕರು ಭಾಗಿಯಾಗಿರುವ ಈ ಹಿನ್ನೆಲೆಯಲ್ಲಿ ಯಾವುದೇ ಅಹಿತರ ಘಟನೆಗಳು ನಡೆಯದಂತೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ.

ಖ್ಯಾತ ಬಾಲಿವುಡ್ ನಟ ನಾನಾ ಪಾಟೇಕರ್ ವಿಧಿವಶ

ಗೋವಾ: ಮನೋಜ್ಞ ಅಭಿನಯಕ್ಕೆ ಹಾಗೂ ವಿಶಿಷ್ಟ ಶೈಲಿಯ ಪಾತ್ರಕ್ಕೆ ಛಾಪು ಮೂಡಿಸಿದ್ದ ಖ್ಯಾತ ಬಾಲಿವುಡ್ ಹಿರಿಯ ನಟ ನಾನಾ ಪಾಟೇಕರ್ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ನಟ, ನಿರ್ದೇಶಕ ಹಾಗೂ ಬರಹಗಾರ ನಾನಾ ಪಾಟೇಕರ್ (75) ಅವರು ಇಂದು ಬೆಳಗ್ಗೆ ಗೋವಾದ ತಮ್ಮ ನಿವಾಸದಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಗೋವಾದ ಡೊನಾ ಪೌಲಾದಲ್ಲಿರುವ ನಿವಾಸದಲ್ಲಿ ನಾನಾ ಪಾಟೇಕರ್ ಅವರು ಅಸ್ವಸ್ಥರಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ವೈದ್ಯರು ಅವರು ಮೃತಪಟ್ಟಿರುವುದಾಗಿ ಘೋಷಿಸಿದರು.

ಮಣಿಪಾಲ್ ಆಸ್ಪತ್ರೆಯ ಆಂಕಾಲಜಿ ವಿಭಾಗದ ಮುಖ್ಯಸ್ಥ ಡಾ. ಶೇಖರ್ ಸಾಲ್ಕರ್ ಈ ಕುರಿತು ಮಾಹಿತಿ ನೀಡಿ ಇಂದು ಬೆಳಗ್ಗೆ ಸುಮಾರು 5.20ಕ್ಕೆ ನಾನಾ ಪಾಟೇಕರ್ ನಿಧನರಾಗಿದ್ದಾರೆ. ಅವರನ್ನು ಉಳಿಸಲು ಸುಮಾರು 45 ನಿಮಿಷಗಳ ಕಾಲ ಸ ಚಿಕಿತ್ಸೆ ನಡೆಸಿದರೂ ಫಲಕಾರಿಯಾಗಲಿಲ್ಲ ಎಂದು ಹೇಳಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೆಡಿಕೋ–ಲೀಗಲ್ ಕೇಸ್ ದಾಖಲಿಸಲಾಗಿದ್ದು, ಮರಣೋತ್ತರ ಪರೀಕ್ಷೆ ನಡೆಸಲಾಗುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ. ಮರಣೋತ್ತರ ಪರೀಕ್ಷೆಯ ವಿವರಗಳು ಇನ್ನಷ್ಟೇ ಹೊರಬರಬೇಕಿದೆ.

ಕುಟುಂಬಸ್ಥರು ಗೋವಾಕ್ಕೆ ತೆರಳಿದ್ದಾರೆ

ನಾನಾ ಪಾಟೇಕರ್ ಅವರ ಪುತ್ರ ಮಲ್ಹಾರ್ ಪಾಟೇಕರ್ ಅವರು ತಂದೆಯ ನಿಧನವನ್ನು ಖಚಿತಪಡಿಸಿದ್ದಾರೆ. ಕುಟುಂಬಸ್ಥರು ಗೋವಾಕ್ಕೆ ತೆರಳಿದ್ದು, ನಾನಾ ಪಾಟೇಕರ್ ಅವರು ವೈಯಕ್ತಿಕ ಕೆಲಸದ ನಿಮಿತ್ತ ಗೋವಾದಲ್ಲಿದ್ದರು ಎಂದು ತಿಳಿಸಿದ್ದಾರೆ.

ನಾನಾ ಪಾಟೇಕರ್ ಅವರ ಪಾರ್ಥಿವ ಶರೀರವನ್ನು ಮಧ್ಯಾಹ್ನದ ಬಳಿಕ ಪುಣೆಗೆ ತರಲಾಗುವುದು ಎಂದು ಮಲ್ಹಾರ್ ತಿಳಿಸಿದ್ದಾರೆ.

ಹಲವು ದಶಕಗಳ ಅದ್ಭುತ ಸಿನಿ ಪಯಣ

ನಾನಾ ಪಾಟೇಕರ್ ಅವರ ಮೂಲ ಹೆಸರು ವಿಶ್ವನಾಥ ಪಾಟೇಕರ್. 1951ರ ಜನವರಿ 1ರಂದು ಮಹಾರಾಷ್ಟ್ರದ ಮುರುಡ್–ಜಂಜೀರಾದಲ್ಲಿ ಜನಿಸಿದ ಅವರು ಮರಾಠಿ



ಹಾಗೂ ಹಿಂದಿ ಚಿತ್ರರಂಗದಲ್ಲಿ ನಟ, ನಿರ್ದೇಶಕ ಮತ್ತು ಬರಹಗಾರರಾಗಿ ತಮ್ಮದೇ ಛಾಪು ಮೂಡಿಸಿದ್ದರು.

ಬಡತನದ ಹಿನ್ನೆಲೆಯಲ್ಲಿ ಬೆಳೆದ ನಾನಾ ಪಾಟೇಕರ್ ಅವರು ಚಿಕ್ಕ ವಯಸ್ಸಿನಲ್ಲೇ ಕೆಲಸ ಮಾಡಲು ಆರಂಭಿಸಿದ್ದರು. ಮುಂಬೈನ ಚುನಾಭಟ್ಟಿ ಪ್ರದೇಶದಲ್ಲಿ ಸಿನಿಮಾ ಪೋಸ್ಟರ್‌ಗಳನ್ನು ಬಿಡಿಸುವ ಕೆಲಸವನ್ನೂ ಮಾಡಿದ್ದ ಅವರು ಆರಂಭಿಕ ದಿನಗಳಲ್ಲಿ ತಿಂಗಳಿಗೆ ಸುಮಾರು 35 ರೂಪಾಯಿ ಗಳಿಸುತ್ತಿದ್ದರು.

1978ರಲ್ಲಿ ಬಿಡುಗಡೆಯಾದ 'ಗಮನ್' ಚಿತ್ರದ ಮೂಲಕ ಅವರು ಚಿತ್ರರಂಗಕ್ಕೆ ಪ್ರವೇಶಿಸಿದರು. ಬಳಿಕ 'ಪರಿಂಡಾ', 'ಅಂಗಾರ್', 'ತಿರಂಗಾ', 'ಕ್ರಾಂತಿವೀರ್', 'ಅಗ್ನಿಸಾಕ್ಷಿ', 'ಖಾಮೋಶಿ: ದಿ ಮ್ಯೂಸಿಕಲ್', 'ಶಕ್ತಿ', 'ಅಪಹರಣ', 'ರಾಜ್‌ನೀತಿ', 'ವೆಲ್‌ಕಮ್' ಸೇರಿದಂತೆ ಹಲವು ಚಿತ್ರಗಳಲ್ಲಿ ಗಮನಾರ್ಹ ಅಭಿನಯ ನೀಡಿದರು.

ಪ್ರಶಸ್ತಿಗಳ ಸರದಾರ

1989ರಲ್ಲಿ ಬಿಡುಗಡೆಯಾದ 'ಪರಿಂದಾ' ಚಿತ್ರ ನಾನಾ ಪಾಟೇಕರ್ ಅವರ ವೃತ್ತಿಜೀವನದಲ್ಲಿ ಮಹತ್ವದ ತಿರುವು ನೀಡಿತು. ಈ ಚಿತ್ರದಲ್ಲಿನ ಅಭಿನಯಕ್ಕಾಗಿ ಅವರು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಹಾಗೂ ಫಿಲ್ಮ್‌ಫೇರ್ ಪ್ರಶಸ್ತಿ ಪಡೆದರು.

'ಕ್ರಾಂತಿವೀರ್' ಚಿತ್ರದಲ್ಲಿನ ಅಭಿನಯಕ್ಕಾಗಿ ಅವರು ಅತ್ಯುತ್ತಮ ನಟ ವಿಭಾಗದಲ್ಲಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪಡೆದರು. 'ಅಗ್ನಿಸಾಕ್ಷಿ' ಚಿತ್ರಕ್ಕೂ ರಾಷ್ಟ್ರೀಯ ಪ್ರಶಸ್ತಿ ದೊರೆತಿತ್ತು.

ಅತ್ಯುತ್ತಮ ನಟ, ಅತ್ಯುತ್ತಮ ಪೋಷಕ ನಟ ಹಾಗೂ ಅತ್ಯುತ್ತಮ ಖಳನಟ ವಿಭಾಗಗಳಲ್ಲಿ ಫಿಲ್ಮ್‌ಫೇರ್ ಪ್ರಶಸ್ತಿ ಗೆದ್ದ ಕೆಲವೇ ನಟರಲ್ಲಿ ನಾನಾ ಪಾಟೇಕರ್ ಕೂಡ ಒಬ್ಬರು.

ಜಾನಪದ ಸಾಹಿತ್ಯಕ್ಕೆ ಯುವಕರು ಆಸಕ್ತಿ ತೋರಬೇಕು: ದಾಡಿಬಾವಿ

ನವಲಗುಂದ: ಕರ್ನಾಟಕ ರಾಜ್ಯ ನಾಟಕ ಬರಹಗಾರರ ಕವಿಗಳ ಸಂಘ (ರಿ) ಬೆಂಗಳೂರು ಜಿಲ್ಲಾ ಶಾಖೆ ಧಾರವಾಡ ಸಂಯುಕ್ತ ಆಶ್ರಯದಲ್ಲಿ ಧಾರವಾಡ ಜಿಲ್ಲೆಯ ಪ್ರಥಮ ವಾರ್ಷಿಕೋತ್ಸವ ಹಾಗೂ ಕವಿ ಸಮ್ಮೇಳನ, ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ, ನಾಟಕ ಪ್ರದರ್ಶನ ಕಾರ್ಯಕ್ರಮ ನವಲಗುಂದ ತಾಲೂಕಿನ ಶಿರಕೋಳಗ್ರಾಮದಲ್ಲಿಆಯೋಜಿಸಲಾಗಿತ್ತು. ಶ್ರೀ ಷ.ಬ್ರ.ಮಹೇಶ್ವರ ಶಿವಾಚಾರ್ಯ ಸ್ವಾಮಿಗಳು ಜಡಿಮಠ ಮೊರಬ ಹಾಗೂ ಶ್ರೀ ಚಿದಾನಂದ ಅಪ್ಪನವರು ಸಾನಿಧ್ಯ ವಹಿಸಿದ್ದರು.

ಜಿಲ್ಲಾ ಬಿಜೆಪಿ (ಗ್ರಾ) ಕಾರ್ಯದರ್ಶಿ



ದೇವರಾಜ ಬ. ದಾಡಿಬಾವಿ ಕಾರ್ಯಕ್ರಮದ ಉದ್ಘಾಟನೆನೆರವೇರಿಸಿಮಾತನಾಡಿಇಂದಿನ ಯುವಕರು ಬರವಣಿಗೆ ಹಾಗೂ ಜಾನಪದ ಸಾಹಿತ್ಯದಲ್ಲಿ ಆಸಕ್ತಿ ವಹಿಸಬೇಕು. ಆಧುನಿಕ ಬರವಣಿಗೆಗೆ ಜಾನಪದ ಸಾಹಿತ್ಯ ಮೂಲ ಬೇರು. ಅನೇಕ ಆಧುನಿಕ ಕವಿಗಳು ಮತ್ತು ಕಾದಂಬರಿಕಾರರು ಜನಪದ ಕಥೆ ಹಾಗೂ ಶೈಲಿಯಿಂದ ಪ್ರೇರಣೆ ಪಡೆದು ದೊಡ್ಡ ಕೃತಿಗಳನ್ನು ರಚಿಸಿದ್ದಾರೆ. ಅವು ಇಂದಿನ ಯುವಕರಿಗೆ ಪ್ರೇರಣೆಯಾಗಲಿ ಎಂದರು.

ಗ್ರಾಮೀಣ ಯುವ ಸಾಹಿತಿ ಪ್ರತಿಭೆಗಳಿಗೆ ಸರ್ಕಾರ ನಾಟಕ ರಂಗಭೂಮಿ ಮತ್ತು ನಾಟಕದ ಕವಿಗಳಿಗೆ ಸಹಾಯ ಹಸ್ತ ನೀಡಬೇಕೆಂದು ವಿನಂತಿಸಿಕೊಂಡರು.

ಜಿಲ್ಲಾ ಅಧ್ಯಕ್ಷರಾದ ಬಸವರಾಜ್ ಹಿತ್ತಲು ಮನೆ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ರಾಜ್ಯ ಅಧ್ಯಕ್ಷರ ಡಿ.ಆರ್. ಪೂಜಾರ, ರಾಜ್ಯ ಗೌರವಾಧ್ಯಕ್ಷ ಶಂಕರ ಹೂವಿನ ಹಿಪ್ಪರಗಿ, ಕವಿಗಳಾದ ಸಮ್ಮೇಳನದ ಗೌರವಾಧ್ಯಕ್ಷರಾದ ಬಿ.ಕೆ. ಹೊಂಗಲ, ತಾಲೂಕ ಅಧ್ಯಕ್ಷರು ಹಾಗೂ ಗ್ರಾಮದ ಮುಖಂಡರಾದ ಗಂಗಾಧರ ಗಾಣಿಗೇರ ಸೇರಿದಂತೆ ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಜಿಲ್ಲಾಧ್ಯಕ್ಷರು, ಕವಿಗಳು ಹಾಗೂ ಸಾಹಿತ್ಯ ಆಸಕ್ತರು ಕಲಾವಿದರು ಉಪಸ್ಥಿತರಿದ್ದರು.

ಮದ್ಯವ್ಯಸನ ಮುಕ್ತ ದೇಶ ಜಾಥಾ



ಹುಬ್ಬಳ್ಳಿ: ಮಹಾತ್ಮ ಗಾಂಧೀಜಿಯವರ ಜಯಂತಿ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ.) ಧಾರವಾಡ ಜಿಲ್ಲೆ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ (ರಿ.) ಧಾರವಾಡ ಜಿಲ್ಲೆ ಇವರ ಸಂಯುಕ್ತಾಶ್ರಯದಲ್ಲಿ 'ಮದ್ಯವ್ಯಸನ ಮುಕ್ತ ದೇಶ' ಎಂಬ ಶೀರ್ಷಿಕೆಯಡಿ ಜಾಗೃತಿ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಹುಬ್ಬಳ್ಳಿಯ ಕಿಮ್ಸ್ ಆವರಣದಲ್ಲಿರುವ ಮಹಾತ್ಮ ಗಾಂಧೀಜಿಯವರ ಪುತ್ಥಳಿಗೆ ಗಣ್ಯರು ಹಾಗೂ ಜಾಥಾದಲ್ಲಿ ಭಾಗವಹಿಸಿದ್ದವರು ಪುಷ್ಪನಮನ ಸಲ್ಲಿಸಿದರು.

ಬಳಿಕ ಜಾಥಾಕ್ಕೆ ಚಾಲನೆ ನೀಡಲಾಯಿತು.

ಜಾಥಾದಲ್ಲಿ ಮಕ್ಕಳು, ಮಹಿಳೆಯರು ಹಾಗೂ ವಿವಿಧ ವೇಷಭೂಷಣಗಳಲ್ಲಿ ಭಾಗವಹಿಸಿದ್ದವರು ಮದ್ಯಪಾನ ಮತ್ತು ದುಶ್ಚಟಗಳಿಂದ ದೂರವಿರುವಂತೆ ಜನರಲ್ಲಿ ಜಾಗೃತಿ ಮೂಡಿಸಿದರು. ವ್ಯಸನಮುಕ್ತ ಸಮಾಜ ನಿರ್ಮಾಣ ಹಾಗೂ ಆರೋಗ್ಯಕರ ಜೀವನದ ಕುರಿತು ಸಾರ್ವಜನಿಕರಿಗೆ ಸಂದೇಶ ಸಾರಲಾಯಿತು.

ಗಾಂಧೀಜಿಯವರ ಸತ್ಯ, ಅಹಿಂಸೆ ಹಾಗೂ ಸರಳ ಜೀವನದ ಆದರ್ಶಗಳನ್ನು ಸ್ಮರಿಸುತ್ತಾ, ಯುವಜನತೆ ಸೇರಿದಂತೆ ಸಮಾಜದ ಎಲ್ಲ ವರ್ಗದವರು ದುಶ್ಚಟಗಳಿಂದ ದೂರವಿದ್ದು ವ್ಯಸನಮುಕ್ತ ದೇಶ ನಿರ್ಮಾಣಕ್ಕೆಕೈಜೋಡಿಸಬೇಕುಎಂಬ ಸಂದೇಶವನ್ನು ಜಾಥಾ ಮೂಲಕ ಸಾರಲಾಯಿತು.

ಈಸಂದರ್ಭದಲ್ಲಿಜನಜಾಗೃತಿಸಮಿತಿಅಧ್ಯಕ್ಷರು, ಗಣ್ಯರು ಸೇರಿದಂತೆ ಇತರರು ಭಾಗವಹಿಸಿದ್ದರು.

ನವಲಗುಂದ ಬಂದ್ ಕರೆಗೆ ಪೂರ್ವಭಾವಿ ಸಭೆ



ನವಲಗುಂದ: 150 ವರ್ಷದ ಇತಿಹಾಸದಲ್ಲಿಯೇ ಮಳೆಯ ಕೊರತೆ ಆಗಿ ಬೆಳೆ ಹಾನಿಯಾಗಿ ಸಂಕಷ್ಟದಲ್ಲಿರುವ ಪ್ರತಿಯೊಬ್ಬ ರೈತರಿಗೆ 50 ಸಾವಿರ ರೂ. ಪರಿಹಾರ ಹಣವನ್ನು ರೈತರ ಖಾತೆಗೆ ಜಮಾ ಮಾಡುವಂತೆ ಪಂಚಗೃಹ ಹಿರೇಮಠದ ಶ್ರೀ ಇಮ್ಮಡಿ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದರು.

ಸ್ಥಳೀಯ ಪಂಚಗೃಹ ಹಿರೇಮಠದಲ್ಲಿ ಜರುಗಿದ "ನವಲಗುಂದಬಂದ್‌ಕರೆ"ಯಜಾಗೃತಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಮಹಾದಾಯಿ ಕಳಸಾ–ಬಂಡೂರಿ ಜಾತ್ಯಾತೀತ ಹಾಗೂ ಪಕ್ಷಾತೀತ ರೈತ ಹೋರಾಟ ಒಕ್ಕೂಟದ ಅಧ್ಯಕ್ಷ ಲೋಕನಾಥ ಹೇಬಸೂರ ಮಾತನಾಡಿ ಪ್ರಧಾನಮಂತ್ರಿ ಫಸಲ್ ವಿಮಾ ಯೋಜನೆ ಕಾನೂನು ನಿಯಮಗಳನ್ನು ತಿದ್ದುಪಡಿ ಮಾಡಿ ಪ್ರತಿಯೊಬ್ಬ ರೈತರಿಗೆ ಬೆಳೆ ಹಾನಿ ಪರಿಹಾರ ನೀಡುವಲ್ಲಿ ಅನ್ಯಾಯವಾಗಿದೆ. ರೈತರ ಎಲ್ಲಾ ಕೃಷಿ ಸಾಲಗಳನ್ನು ಸಂಪೂರ್ಣ ಮನ್ನಾ ಮಾಡಿ ರೈತರನ್ನು ಋಣಮುಕ್ತರಾಗಿ ಮಾಡಬೇಕು. ಅಲ್ಲದೇ ಈಗಿರುವ ಕಡಲೆ ಬೆಂಬಲ ಬೆಲೆ ಅವೈಜ್ಞಾನಿಕವಾಗಿದ್ದು ಬೆಂಬಲ ಬೆಲೆಯನ್ನು ಹೆಚ್ಚಿಸಬೇಕು. ಕೃಷಿ ಕಾರ್ಮಿಕರ ಹಾಗೂ ಮಹಿಳಾ ಸ್ವ–ಸಹಾಯ ಗುಂಪುಗಳ ಸಾಲ ಮನ್ನಾ ಹಾಗೂ ನಿರುದ್ಯೋಗಿ ವಿದ್ಯಾರ್ಥಿಗಳಿಗೆ ಖಾಲಿ ಇರುವ ಸರಕಾರಿ ಹುದ್ದೆಗಳನ್ನು ನೇಮಕಾತಿ ಹಾಗೂ ರೈತರ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ಉಚಿತವಾಗಿ ನೀಡಬೇಕು ಎಂದು ಆಗ್ರಹಿಸಲಾಗುವುದು ಎಂದರು .

ರೈತ ಹೋರಾಟಗಾರ ರಘುನಾಥ ನಡುವಿನಮನಿ ಮಾತನಾಡಿ ರೈತ ಕುಲ ಉಳಿವಿಗಾಗಿ, ರೈತರ ಬೇಡಿಕೆ ಈಡೇರಿಕೆಗಾಗಿ ರಾಜ್ಯ ಹಾಗೂ ಕೇಂದ್ರ ಸರಕಾರಗಳ ರೈತ ವಿರೋಧಿ ನೀತಿಯನ್ನು ಧಿಕ್ಕರಿಸಿ ಹಲವು ಪೂಜ್ಯ ಮಠಾಧೀಶರ ನೇತೃತ್ವದಲ್ಲಿ ಅ 07 ಬುಧವಾರ ಭಾಗವಹಿಸಿ ಹೋರಾಟ ಯಶಸ್ವಿಗೊಳಿಸಬೇಕು ಎಂದು ಎಲ್ಲ ರೈತ, ಕನ್ನಡಪರ ಸಂಘಟನೆಗಳು ಹಾಗೂ ವ್ಯಾಪಾರಸ್ಥರಲ್ಲಿ ಮನವಿ ಮಾಡಿದರು.

ಶ್ರೀಶೈಲ ಮೂಲಿಮನಿ, ರಘುನಾಥ ನಡುವಿನಮನಿ, ರವಿ ಹುಣಸಿಮರದ, ಮೈಲಾರಪ್ಪ ವೈದ್ಯ, ಬರಮಪ್ಪ ಕಾತರಕಿ, ಅಡಿವೆಪ್ಪ ಶಿರಸಂಗಿ, ವಿಕ್ರಮ ಕುರಿ, ರಿಯಾಜ ನಾಸಿಪುಡಿ, ದೇವೇಂದ್ರಪ್ಪ ಹಳ್ಳದ ಸೇರಿದಂತೆ ವಿವಿಧ ಸಂಘಟನೆಗಳ ರೈತ ಮುಖಂಡರು ಭಾಗವಹಿಸಿದ್ದರು.

ಗಾಳಿ, ಮಳೆಗೆ ಬೆಳೆ ಹಾನಿ: ತಹಶೀಲ್ದಾರ್‌ರಿಂದ ಪರಿಶೀಲನೆ



ಕಲಘಟಗಿ: ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಸೋಮವಾರ ಮಧ್ಯಾಹ್ನ ಸುರಿದ ಗಾಳಿ ಮಳೆಗೆ ಬೆಳೆಗಳಿಗೆ ಹಾನಿಯಾಗಿದ್ದು, ಜಮೀನುಗಳಿಗೆ ತಹಶೀಲ್ದಾರ್ ಬಸವರಾಜ ಹೊಂಕಣ್ಣದವರ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲ್ಲೂಕಿನ ದಾಸ್ತಿಕೊಪ್ಪ, ರಾಮನಾಳ, ಹಾರೂಗೇರಿ, ಕಾಮಧೇನು, ಹಿರೇಹೊನ್ನಳ್ಳಿ ಹಾಗೂ ಸುತ್ತಲಿನ ಗ್ರಾಮಗಳ ಜಮೀನಿನಲ್ಲಿ ಬೆಳೆದ ಮೆಕ್ಕೆಜೋಳ, ಕಬ್ಬು ಹಾಗೂ ತೋಟಗಾರಿಕೆ ಬೆಳೆಗಳು ಗಾಳಿ, ಮಳೆಗೆ ನೆಲಕ್ಕುರುಳಿವೆ. ಹಾರೂಗೇರಿ ಗ್ರಾಮದ ಪಾರವ್ವ ವಾಲಿಕಾರ ಅವರ ಮನೆಯ ಗೋಡೆ ಕುಸಿದಿದೆ. ರಾಮನಾಳ ಗ್ರಾಮದ ಚಂದ್ರಪ್ಪ ದೊಡ್ಡಮನಿ ಅವರ ಮನೆಯ ಚಾವಣಿ ಹಾರಿ ಹೋಗಿದೆ.

'ಕೊಯ್ಲಿಗೆ ಬಂದಿದ್ದ ಬೆಳೆಗಳು ಎರಡು, ಮೂರು ತಾಸು ಸುರಿದ ಮಳೆ, ಗಾಳಿಗೆ ಹಾಳಾಗಿದ್ದು, ಕೈ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಬೆಳೆಹಾನಿ ಪರಿಹಾರ ತಕ್ಷಣ ನೀಡಬೇಕು' ಎಂದು ರೈತರು ಅಧಿಕಾರಿಗಳಲ್ಲಿ ವಿನಂತಿಸಿದರು.

'ಬೆಳೆ ಹಾಗೂ ಮನೆ ಹಾನಿ ಬಗ್ಗೆ ಪರಿಶೀಲನೆ ನಡೆಸಿದ್ದು, ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸಲಾಗುವುದು' ಎಂದು ತಹಶೀಲ್ದಾರ್ ಬಸವರಾಜ ತಿಳಿಸಿದರು. ರೈತ ಸಂಪರ್ಕ ಕೇಂದ್ರದ ಅಧಿಕಾರಿ ಮಂಜುಳಾ ದೇವಲಾಪುರ, ಆಕಾಶ ಪಾಟೀಲ, ಚಂದ್ರಗೌಡ ಪಾಟೀಲ, ಶಿವಪುತ್ರಪ್ಪ ಪರಿಯಾಣ, ಶೇಕರಗೌಡ ಪಾಟೀಲ, ಸೋಮಶೇಖರ್ ಬೆನ್ನೂರ, ಹನುಮಂತಪ್ಪ ಇಗೋಲಿ, ಶೇಕಪ್ಪ, ಗುರು ಕಂಪ್ಲಿ, ಗಣೇಶ ಕೊಳೆನ್ನವರ ಇದ್ದರು.

ಸಮಾಜದ ಸಂಘಟನೆಗೆ ಶ್ರಮಿಸಲು ಕರೆ



ನವಲಗುಂದ: ಕುರುಬ ಸಮಾಜದ ಏಕತೆ, ಸಂಘಟನೆ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಧಾರವಾಡ ಮನ್ಸೂರ ಮಠದ ಬಸವರಾಜ ದೇವರು ಹೇಳಿದರು.

ಸ್ಥಳೀಯ ಕನಕ ಭವನದಲ್ಲಿ ನಡೆದ ಕನಕ ಕಲ್ಯಾಣ ಮಂಟಪ ಅಭಿವೃದ್ಧಿ ಹಾಗೂ ಕುರುಬ ಸಮಾಜದ ಸಂಘಟನಾ ಸಭೆಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಇದಕ್ಕೂ ಮೊದಲು ಮಾಜಿ ಸಚಿವ ಕೆ ಎನ್ ಗಡ್ಡಿ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಸಮುದಾಯ ಭವನ ಅಭಿವೃದ್ಧಿ, ವಿವಿಧ ಸಾಮಾಜಿಕ ವಿಚಾರಗಳು ಹಾಗೂ ಸಮಾಜದ ಸಂಘಟನೆಯ ಮಹತ್ವದ ವಿಚಾರಗಳ ಕುರಿತು ಮಾತನಾಡಿದರು.

ಕನಕ ಕಲ್ಯಾಣ ಮಂಟಪ ಅಧ್ಯಕ್ಷೆ ಪ್ರೇಮಾ ನಾಯ್ಕರ, ಕುರುಬ ಸಮಾಜದ ಅಧ್ಯಕ್ಷ ಯೋಗಪ್ಪ ಗೋಲನಾಯ್ಕರ, ಕೆಪಿಸಿಸಿ ಸದಸ್ಯ ವಿನೋದ ಅಸೂಟಿ, ಮಾಜಿ ಜಿ ಪಂ ಉಪಾಧ್ಯಕ್ಷ ಶಿವಾನಂದ ಕರಿಗಾರ, ಮಾಜಿ ಡಿವೈಎಸ್‌ಪಿ ಡಿ.ಡಿ. ಮಾಳಗಿ, ಸಮಾಜದ ಮುಖಂಡರಾದ ಪರಶುರಾಮ ದಿವಾನದ, ಹನುಮಂತಪ್ಪ ಇಬ್ರಾಹಿಂಪುರ ಸೇರಿದಂತೆ ಸಮಾಜದ ನೂರಾರು ಪ್ರಮುಖರು ಸಭೆಯಲ್ಲಿ ಪಾಲ್ಗೊಂಡು ಕನಕ ಕಲ್ಯಾಣ ಮಂಟಪ ಅಭಿವೃದ್ಧಿ ಕುರಿತು ಚರ್ಚಿಸಿದರು.

PUBLIC FAST KANNADA DAILY NEWS PAPER

ದಿನಾಂಕ : 09–10–2026

ಮಿಣಜಗಿ ಗ್ರಾಮದ ರಸ್ತೆ ಸಾರಿಗೆ ಬಸ್‌ಗಳ ನಿಲುಗಡೆಗೆ ಗ್ರಾಮಸ್ಥರ ಆಗ್ರಹ



ತಾಳಿಕೋಟೆ: ಮಿಣಜಗಿ ಗ್ರಾಮದ ಮಾರ್ಗವಾಗಿ ಮುದ್ದೇಬಿಹಾಳಕ್ಕೆ ಹೋಗುವ ರಸ್ತೆ ಸಾರಿಗೆ ಬಸ್‌ಗಳು ಮಿಣಜಗಿಮಾರ್ಗಬದಲಿಸಿಹಡಗಿನಾಳಮಾರ್ಗವಾಗಿ ಹೋಗುತ್ತಿರುವುದರಿಂದ ಗ್ರಾಮಸ್ಥರಿಗೆ ತುಂಬಾ ಅನಾನುಕೂಲವಾಗುತ್ತಿದ್ದು ಈ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸಬೇಕು ಎಂದು ಆಗ್ರಹಿಸಿ ಮಿಣಜಗಿ ಗ್ರಾಮಸ್ಥರು ಘಟಕ ವ್ಯವಸ್ಥಾಪಕ ಪಿ.ಕೆ. ಜಾಧವ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು.

ಮುಖಂಡ ವೀರೇಶ ಬಾಗೇವಾಡಿ ಮಾತನಾಡಿ, 'ಮಿಣಜಗಿ ಗ್ರಾಮ ಒಂದು ಉದ್ಯೋಗ ಕೇಂದ್ರ ವಾಗಿರುವುದರಿಂದ ಇಲ್ಲಿಗೆ ದಿನವೂ ನೂರಾರು ಕೂಲಿಕಾರ್ಮಿಕರು ವಿವಿಧ ಗ್ರಾಮಗಳಿಂದ ಕೆಲಸಕ್ಕೆ ಬರುತ್ತಾರೆ. ಗ್ರಾಮದಿಂದ ತಾಳಿಕೋಟೆ ಪಟ್ಟಣ–ಕ್ಕೆ ಹೋಗುವ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವೃದ್ಧರಿಗೆ ಹಾಗೂ ಉದ್ಯೋಗಸ್ಥರಿಗೆ ತುಂಬಾ ತೊಂದರೆಯಾಗುತ್ತಿದೆ.

ಇದರ ಕುರಿತು ಈಗಾಗಲೇ ತಿಳಿಸಿದರೂ ಸೂಕ್ತ ಸ್ಪಂದನೆ ಸಿಕ್ಕಿಲ್ಲ. ವಿಜಯಪುರದಿಂದ ತಾಳಿಕೋಟೆಗೆ ಹೋಗುವ ಬಸ್ಸುಗಳು ಮಿಣಜಗಿ ಕ್ರಾಸ್‌ನಲ್ಲಿ ನಿಲ್ಲದೇ ಇರುವುದರಿಂದ ಆ ಭಾಗದ ವಿವಿಧ ಗ್ರಾಮಗಳಿಂದ ಮಿಣಜಗಿ ಗ್ರಾಮಕ್ಕೆ ಬರುವ ಕೂಲಿ ಕಾರ್ಮಿಕರಿಗೆ ತುಂಬಾ ತೊಂದರೆಯಾಗುತ್ತಿದೆ.

ಆದ್ದರಿಂದ ಈ ಎರಡೂ ಸಮಸ್ಯೆಗಳನ್ನು ಪರಿಹರಿಸಲು ಆದಷ್ಟು ಬೇಗ ಅಧಿಕಾರಿಗಳು ಕ್ರಮ ವಹಿಸಬೇಕು' ಎಂದರು.

ಮನವಿ ಸ್ವೀಕರಿಸಿದ ಘಟಕ ವ್ಯವಸ್ಥಾಪಕ ಪಿ.ಕೆ. ಜಾಧವ, 'ಇದರ ಕುರಿತು ಕ್ರಮ ವಹಿಸಲು ನಾನು ಈಗಾಗಲೇ ನಮ್ಮ ಸಂಚಾರ ನಿಯಂತ್ರಕ ಶೇಖರ ಅವರಿಗೆ ಸೂಚನೆ ನೀಡಿದ್ದೇನೆ' ಎಂದರು.

ಘಟಕದ ಸಿಬ್ಬಂದಿ ಮೇಲ್ವಿಚಾರಕ ಬಸನಗೌಡ ಚೊಕಾವಿ. ಮಿಣಜಗಿ ಗ್ರಾಮದ ಪ್ರಮುಖರಾದ ಸಂಗನಗೌಡ ಪಾಟೀಲ, ಐ.ವೈ. ಹಿರೇಮಠ, ಎ.ಎಸ್. ಬಿರಾದಾರ, ಎಂ.ಜೆ.ಪಾಟೀಲ, ಕೆ.ಎ.ಪಾಟೀಲ, ಸಿ.ಎಂ.ಸಜ್ಜನ, ಐ.ಎಂ. ಯಾಳವಾರ, ಶರಣಗೌಡ ಬಿರಾದಾರ, ಈರಣ್ಣ ಮದರಿ, ಸೋಮು ನಾಯ್ಕೋಡಿ, ಎಂ.ಆರ್. ಅಕ್ಕಿ, ಬಿ.ಎಚ್. ಬಶೆಟ್ಟಿ, ಕೆ.ಎಂ. ಹಗರಟಗಿ, ರಾಮು ಜಂಬಗಿ, ಮಹಾಂತೇಶ ಮಂಗ್ಯಾಳ, ಶಿವು ಮಡಿಕೇಶ್ವರ ಇದ್ದರು.

ನಿರಂತರ ನೀರು ಹರಿಸಲು ರೈತರ ಆಗ್ರಹ



ಆಲಮಟ್ಟಿ: ಮುಂಗಾರುಮಳೆಕೊರತೆಯಿಂದ ಒಣಗುತ್ತಿರುವ ಬೆಳೆಗಳನ್ನು ಉಳಿಸಿಕೊಳ್ಳಲು ಆಲಮಟ್ಟಿ ಜಲಾಶಯ ವ್ಯಾಪ್ತಿಯ ಎಲ್ಲ ಕಾಲುವೆಗಳಿಗೆ ವಾರಾಬಂಧಿ ಇಲ್ಲದೇ ನಿರಂತರವಾಗಿ ನೀರು ಹರಿಸಬೇಕು ಎಂದು ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ಸೋಮವಾರ ಪ್ರತಿಭಟನೆ ನಡೆಯಿತು.

ರಾಮಲಿಂಗೇಶ್ವರ ದೇವಸ್ಥಾನದಿಂದ ಮುಖ್ಯ ಎಂಜಿನಿಯರ್ ಕಚೇರಿಯವರೆಗೆ ರೈತರು ಪ್ರತಿಭಟನಾ ಮೆರವಣಿಗೆ ನಡೆಸಿ, ಮನವಿ ಸಲ್ಲಿಸಿದರು.

ಮುಂಗಾರು ಆರಂಭದಲ್ಲಿ ಅಲ್ಪಮಳೆಯಾಗಿದ್ದರೂ ಬಳಿಕ ಮಳೆ ಸಂಪೂರ್ಣ ಕೈಕೊಟ್ಟಿದೆ. ಇದರಿಂದ ತೊಗರಿ, ಶೇಂಗಾ, ಸೂರ್ಯಕಾಂತಿ, ಮೆಕ್ಕೆಜೋಳ ಸೇರಿದಂತೆ ವಿವಿಧ ಬೆಳೆಗಳು ತೇವಾಂಶದ ಕೊರತೆಯಿಂದ ಒಣಗುತ್ತಿವೆ.

ಬೆಳೆ ನಷ್ಟವಾದರೆ ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಹೀಗಾಗಿ ವಾರಾಬಂಧಿ ಕೈಬಿಟ್ಟು, ಬೆಳೆಗಳಿಗೆ ಅಗತ್ಯ ಪ್ರಮಾಣದ ನೀರು ಹರಿಸಬೇಕು. ಇಲ್ಲದಿದ್ದರೆ ಉಪವಾಸಸತ್ಯಾಗ್ರಹಆರಂಭಿಸಲಾಗುವುದು' ಎಂದು ಎಚ್ಚರಿಸಿದರು.

ನಾರಾಯಣಪುರ ಜಲಾಶಯದಿಂದ ಆಂಧ್ರಪ್ರದೇಶ ಹಾಗೂ ತೆಲಂಗಾಣಕ್ಕೆ ನಿರಂತರ ನೀರು ಹರಿಸುತ್ತಿರುವುದಕ್ಕೂ ರೈತ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದರು.

ಮುಂದಿನ ಬೇಸಿಗೆ ಸೇರಿದಂತೆ ಇನ್ನೂ ಹಲವು ತಿಂಗಳು ರಾಜ್ಯದ ಜನ, ಜಾನುವಾರು ಹಾಗೂ ಕೃಷಿಗೆ ನೀರಿನ ಅಗತ್ಯವಿರುವುದರಿಂದ ನೆರೆ ರಾಜ್ಯಗಳಿಗೆ ಅನಗತ್ಯವಾಗಿ ನೀರು ಹರಿಸಬಾರದು ಎಂದು ಒತ್ತಾಯಿಸಿದರು. ಅ.6ರಿಂದ ನೀರು ಹರಿಸುವುದಾಗಿ ಸೂಪರಿಂಟೆಂಡೆಂಟ್ ಎಂಜಿನಿಯರ್ ಬಿ.ಎಸ್. ಪಾಟೀಲ ಭರವಸೆ ನೀಡಿದರು.

ರೈತಮುಖಂಡರಾದಅರವಿಂದಕುಲಕರ್ಣಿ, ನಿಂಗರಾಜ ಆಲೂರ, ಬಸವರಾಜ ಬಾಗೇವಾಡಿ, ವಿಠ್ಠಲ ಬಿರಾದಾರ, ಸೀತಪ್ಪ ಗಣಿ, ಸೋಮನಗೌಡ ಬಿರಾದಾರ, ರವಿಶಂಕರ ಕೋತಿನ, ವೆಂಕಟೇಶ ವಡ್ಡರ, ಹನುಮಗೌಡ ಪಾಟೀಲ, ಸಂಜೀವ ಮನ್ನಿಕೇರಿ, ಬಸವರಾಜ ಕಂದಗನೂರ ಇದ್ದರು.

ಕರಕುಶಲ ಕಲೆ ಪ್ರಾತ್ಯಕ್ಷಿಕೆ: ವಿದ್ಯಾರ್ಥಿಗಳ ಕೌತುಕ



ಆಲಮಟ್ಟಿ: ಕೈಚಳಕ, ಸೃಜನಶೀಲತೆ ಹಾಗೂ ಕಲ್ಪನೆಯಿಂದ ನಿರುಪಯುಕ್ತ ವಸ್ತುಗಳಿಗೂ ಹೊಸ ರೂಪ ನೀಡಿ ಉಪಯುಕ್ತ ಹಾಗೂ ಆಲಂಕಾರಿಕ ವಸ್ತುಗಳನ್ನಾಗಿ ಪರಿವರ್ತಿಸುವ ಕರಕುಶಲ ಕಲೆಯ ವೈವಿಧ್ಯಮಯ ಪ್ರಾತ್ಯಕ್ಷಿಕೆಯನ್ನು ವಿದ್ಯಾರ್ಥಿಗಳು ಕೌತುಕದಿಂದ ವೀಕ್ಷಿಸಿ ಸಂಭ್ರಮಿಸಿದರು.

ಇಲ್ಲಿನ ಆರ್.ಬಿ.ಪಿ.ಜಿ. ಹಳಕಟ್ಟಿ ಪ್ರೌಢಶಾಲೆಯಲ್ಲಿ ಭಾರತ ಸರ್ಕಾರದ ಜವಳಿ ಸಚಿವಾಲಯ, ಧಾರವಾಡದ ಕರಕುಶಲ ವಿಭಾಗದ ಮಾರ್ಕೆಟಿಂಗ್ ಸಹಾಯ ಮತ್ತು ಸೇವೆಗಳು (ಎನ್‌ಎಚ್‌ಡಿಪಿ) ಯೋಜನೆಯಡಿ ಕರಕುಶಲ ಕಲೆಗಳ ಪ್ರದರ್ಶನ ಹಾಗೂ ಜಾಗೃತಿ ಕಾರ್ಯಕ್ರಮ ಈಚೆಗೆ ನಡೆಯಿತು.


ಕಾರ್ಯಕ್ರಮದಲ್ಲಿ ಬಿದಿರಿನ ಬುಟ್ಟಿ, ರೊಟ್ಟಿ ಬುಟ್ಟಿ, ಮಣ್ಣಿನ ಮಡಿಕೆ ಹಾಗೂ ಗಡಿಗೆ, ಮರದ ಮೇಲೆ ದೇವತಾ ಕೆತ್ತನೆ, ಕಸೂತಿ ಕಲೆ, ಮರಗೆಲಸ ಸೇರಿದಂತೆ ವಿವಿಧ ಕರಕುಶಲ ವಸ್ತುಗಳ ತಯಾರಿಕೆಯ ಪ್ರಾತ್ಯಕ್ಷಿಕೆ ನೀಡಲಾಯಿತು.

ಸಂಪನ್ಮೂಲ ವ್ಯಕ್ತಿಗಳಾದ ಕಾಳಪ್ಪ ಬಡಿಗೇರ, ಮುತ್ತಪ್ಪ ಬುಡ್ಡರ, ಶರಣಪ್ಪ ಕುಂಬಾರ, ಬಸವರಾಜ ಕುಂಬಾರ ಹಾಗೂ ರೇಣುಕಾ ಬಡಿಗೇರ ಅವರು ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ನೀಡಿ ಕರಕುಶಲ ಕಲೆಗಳ ಮಹತ್ವ ತಿಳಿಸಿದರು.

ಕರಕುಶಲ ವಸ್ತುಗಳ ತಯಾರಿಕೆಯನ್ನು ಕಣ್ತುಂಬಿಕೊಂಡ ವಿದ್ಯಾರ್ಥಿಗಳು ಚಪ್ಪಾಳೆ ತಟ್ಟಿ ಸಂತಸ ವ್ಯಕ್ತಪಡಿಸಿದರು. ಸಾಂಪ್ರದಾಯಿಕ ಕಲೆ, ಶ್ರಮ ಹಾಗೂ ಪ್ರಕೃತಿ ಸ್ನೇಹಿ ವಸ್ತುಗಳ ಮಹತ್ವವನ್ನು ಅರಿಯಲು ಕಾರ್ಯಕ್ರಮ ಸಹಕಾರಿಯಾಯಿತು.

ಸಹಾಯಕ ನಿರ್ದೇಶಕ ಕಿರಣ ವಿ.ಎನ್., ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಶಿವಬಸಯ್ಯ ಮಠಪತಿ, ಮುಖ್ಯ ಶಿಕ್ಷಕ ಜಿ.ಎಂ.ಕೋಟ್ಯಾಳ, ಎನ್.ಎಸ್.ಬಿರಾದಾರ, ಜಿ.ಆರ್. ಜಾಧವ, ಎಸ್.ಎಚ್.ನಾಗಣಿ, ಆರ್.ಎಂ.ರಾಠೋಡ, ಎಂ.ಬಿ.ದಶವಂತ, ಶ್ರೀಧರ ಚಿಮ್ಮಲಗಿ, ಎಲ್.ಆರ್. ಶಿಂಧೆ ಇದ್ದರು.

ಯುವಜನತೆಗೆ ಗಾಂಧೀಜಿ ತತ್ವಗಳು ದಾರಿದೀಪ ವಿಜಯಪುರದಲ್ಲಿ ಅಭಿಪ್ರಾಯ



ವಿಜಯಪುರ: ಸತ್ಯ ಮತ್ತು ಅಹಿಂಸೆ ಒಂದೇ ನಾಣ್ಯದ ಎರಡು ಮುಖಗಳು. ಮಹಾನ್ ನಾಯಕರ ಆದರ್ಶ ವಿಚಾರಗಳು ನಮ್ಮೆಲ್ಲರ ಬಾಳಿಗೆ ದಾರಿದೀಪ ಎಂದು ಬೆಂಗಳೂರಿನ ಕರ್ನಾಟಕ ರಾಜ್ಯ ಖಾದಿ ಮಂಡಳಿಯ ಮಾಜಿ ಅಧ್ಯಕ್ಷ ಬಾಪುಗೌಡ ಪಾಟೀಲ ಅಭಿಪ್ರಾಯಪಟ್ಟರು.ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಗಾಂಧೀಜಿ ಹಾಗೂ ಶಾಸ್ತ್ರಿ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ದತ್ತಿಗೋಷ್ಠಿಗಳಿಗೆ ಚಾಲನೆ ನೀಡಿ ಮಾತನಾಡಿದರು.

ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಶಾಂತಿ ತತ್ವಗಳು ಹಾಗೂ ಶಾಸ್ತ್ರೀಜಿಯವರ ಸರಳತೆ, ಪ್ರಾಮಾಣಿಕತೆ ಮತ್ತು ದೃಢ ಸಂಕಲ್ಪ ಇಂದಿನ ಯುವ ಪೀಳಿಗೆಗೆ ಅತ್ಯಂತ ಅವಶ್ಯಕವಾಗಿದೆ ಎಂದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಮಾಧವ ಗುಡಿ, ಶಿಕ್ಷಕ ಸಾಹಿತಿ ಪರವೀನಬಾನು ಶೇಖ ಉಪನ್ಯಾಸ ನೀಡಿದರು. ನಿವೃತ್ತ ಮುಖ್ಯೋಪಾಧ್ಯಾಯ ಬಿ.ಕೆ. ಗೋಟ್ಯಾಳ ಮಾತನಾಡಿದರು.

ರವಿಗೌಡ ಸುಭಾಷಗೌಡ ಪಾಟೀಲ, ಶಶಿಕಲಾ ನಾಯ್ಕೋಡಿ, ಕವಿತಾ ದೊಡಮನಿ, ಬಸವರಾಜ ಜಾಲಗೇರಿ, ರಾಘವೇಂದ್ರ ನೆಬಗೇರಿ, ಅರ್ಜುನ ಶಿರೂರ, ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಸುಖದೇವಿ ಅಲಬಾಳಮಠ, ಸಿದ್ರಾಮಪ್ಪ ಜಂಗಮಶೆಟ್ಟಿ ಉಪಸ್ಥಿತರಿದ್ದರು.

ವಿಜಯಪುರ ಜಿಲ್ಲೆಯನ್ನು 371ಜೆ ಅಡಿ ಸೇರ್ಪಡೆಗೆ ಆಗ್ರಹಿಸಿ ಸತ್ಯಾಗ್ರಹ


ಸಿಂದಗಿ: ವಿಜಯಪುರ ಜಿಲ್ಲೆಯನ್ನು 371ಜೆ ಅಡಿ ಸೇರ್ಪಡೆ ಮಾಡುವಂತೆ ಆಗ್ರಹಿಸಿ ನಗರದಲ್ಲಿ ನಡೆದ ಸತ್ಯಾಗ್ರಹ ಸ್ಥಳಕ್ಕೆ ಸಂಸದ ರಮೇಶ ಜಿಗಜಿಣಗಿ ಸೋಮವಾರ ಭೇಟಿ ನೀಡಿದರು.

ಹೋರಾಟಗಾರರಿಂದ ಮನವಿ ಸ್ವೀಕರಿಸಿದ ಸಂಸದರು ಜಿಲ್ಲೆಯ ಶಾಸಕರು, ಸಚಿವರು ರಾಜ್ಯ ಸರ್ಕಾರದಿಂದ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿದರೆ ಲೋಕಸಭೆಯಲ್ಲಿ ಚರ್ಚಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಮಾಜಿ ಶಾಸಕ ರಮೇಶ ಭೂಸನೂರ, ಬಿಜೆಪಿ ಮಂಡಲ ಅಧ್ಯಕ್ಷ ಸಂತೋಷ ಪಾಟೀಲ ಡಂಬಳ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಸಿದ್ದು ಪಾಟೀಲ ಹೂವಿನಹಳ್ಳಿ, ವರ್ತಕರ ಸಂಘದ ಅಧ್ಯಕ್ಷ ಅಶೋಕ ವಾರದ, ದಾನಪ್ಪಗೌಡ ಚನಗೊಂಡ ವಕೀಲ, ರಂಗನಾಥ ತೋರ್ಪೆ, ರೈತ ಸಂಘದ ಸಿದ್ರಾಮ ರಂಜಣಗಿ, ಗುರುರಾಜ ಪಡಶೆಟ್ಟಿ, ಕೆಆರ್‌ಎಸ್ ಪಕ್ಷದ ಸಂಗಣ್ಣ ಬ್ಯಾ–ಕೋಡ, ಸಾಯಬಣ್ಣ ದೇವರಮನಿ, ಆನಂದ ಶಾಬಾದಿ, ಪ್ರಶಾಂತ ಕದ್ದರಕಿ, ಶಂಕರ ಬಗಲಿ ಹಾಜರಿದ್ದರು.



ವಿಜಯಪುರದಲ್ಲಿ ನಕಲಿ ಮರಣ ಪ್ರಮಾಣಪತ್ರ ಬಳಸಿ ಮತದಾರರ ಹೆಸರು ತೆಗೆದ ಆರೋಪ



ವಿಜಯಪುರ: 'ವಿಜಯಪುರ ನಗರ ವಿಧಾನಸಭಾ ಕ್ಷೇತ್ರದಲ್ಲಿ ಜೀವಂತ ಮತದಾರರನ್ನು ಮೃತಪಟ್ಟಿದ್ದಾರೆ ಎಂದು ತೋರಿಸಿ ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲು ಶಾಸಕ ಯತ್ನಾಳ ಅವರು ನಕಲಿ ಮರಣ ಪ್ರಮಾಣಪತ್ರಗಳನ್ನು ಬಳಸಿದ್ದು,

ಈ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಕಾಂಗ್ರೆಸ್ ಮುಖಂಡರು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರಿಗೆ ಮನವಿ ಸಲ್ಲಿಸಿದರು.

ಕೆಪಿಸಿಸಿ ಸದಸ್ಯ ಅಬ್ದುಲ್ ಹಮೀದ್ ಮುಶ್ರೀಫ್ ಮಾತನಾಡಿ, 'ಕೆಲವು ಮತದಾರರು ಮೃತಪಟ್ಟಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಲೆಟರ್‌ಹೆಡ್‌ನಲ್ಲಿ ಉಲ್ಲೇಖಿಸಿ ದಾಖಲೆಗಳನ್ನು ಸಲ್ಲಿಸಲಾಗಿದ್ದು, ಅವುಗಳ ಆಧಾರದ ಮೇಲೆ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕುವ ಪ್ರಕ್ರಿಯೆ ನಡೆದಿದೆ' ಎಂದು ಆರೋಪಿಸಿದರು.

ಎಂಟು ಮತದಾರರು ಮೃತಪಟ್ಟಿದ್ದಾರೆ ಎಂದು ಪಟ್ಟಿ ಸಲ್ಲಿಸಲಾಗಿದ್ದು, ಏಳು ಮಂದಿಗೆ ಸಂಬಂಧಿಸಿದ ಮರಣ ಪ್ರಮಾಣಪತ್ರಗಳ ಪ್ರತಿಗಳನ್ನು ಕೂಡ ನೀಡಲಾಗಿದೆ. ಆದ–ರೆ, ಕಾಂಗ್ರೆಸ್‌ನ ಬಿ.ಎಲ್. ಏಗಳು ಪರಿಶೀಲಿಸಿದಾಗ, ಆ ಏಳು ಮತದಾರರು ಜೀವಂತವಾಗಿರುವುದು ಕಂಡುಬಂದಿದೆ' ಎಂದರು.

ಮರಣ ಪ್ರಮಾಣಪತ್ರಗಳು ನೈಜವಾಗಿವೆಯೇ ಅವುಗಳನ್ನು ಯಾವ ದಾಖಲೆಗಳ ಆಧಾರದ ಮೇಲೆನೀಡಲಾಗಿದೆ?ಮತದಾರರ ಹೆಸರುಗಳನ್ನು ತೆಗೆದುಹಾಕುವ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಪಾಲಿಸಲಾಗಿದೆಯೇ?

ಎಂಬುದನ್ನು ಸ್ವತಂತ್ರವಾಗಿ ಪರಿಶೀಲಿಸಬೇಕು' ಎಂದು ಆಗ್ರಹಿಸಿದರು.

ನಗರ ಕ್ಷೇತ್ರದ 198 ಮತಗಟ್ಟೆಗಳ ವ್ಯಾಪ್ತಿಯಲ್ಲಿ ಸುಮಾರು 1,046 ಅಲ್ಪಸಂಖ್ಯಾತ ಸಮುದಾಯದ ಮತದಾರರನ್ನು ಮೃತಪಟ್ಟಿದ್ದಾರೆ ಎಂದು ತೋರಿಸಿ ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಲು ಶಾಸಕ ಯತ್ನಾಳಪ್ರಯತ್ನಿಸಿದ್ದಾರೆ' ಎಂದು ಆರೋಪಿಸಿದರು.

ಈ ಸಂಬಂಧದ ದಾಖಲೆಗಳನ್ನು ಚುನಾವಣಾ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳ ಪರಿಶೀಲನೆಗಾಗಿ ಕಳುಹಿಸಿದ್ದು, ಸ್ಥಳೀಯ ಪರಿಶೀಲನೆಯಲ್ಲಿ ಹಲವು ಮತದಾರರು ಜೀವಂತವಾಗಿರುವುದು ಕಂಡುಬಂದಿದೆ' ಎಂದರು.

ತಪ್ಪು ಘೋಷಣೆ ನೀಡುವುದು ಕಾನೂನುಬದ್ಧವಾಗಿ ಶಿಕ್ಷಾರ್ಹವಾಗಬಹುದು.

ಹೀಗಾಗಿ ಸಲ್ಲಿಸಲಾದ ಮರಣ ಪ್ರಮಾಣಪತ್ರಗಳು ಹಾಗೂ ಇತರ ದಾಖಲೆಗಳ ಸತ್ಯಾಸತ್ಯತೆ ಪರಿಶೀಲಿಸಿ, ತಪ್ಪು ದಾಖಲೆ ಅಥವಾ ಸುಳ್ಳು ಮಾಹಿತಿ ಬಳಕೆ ದೃಢಪಟ್ಟರೆ ಸಂಬಂಧಪಟ್ಟವರ ವಿರುದ್ಧ ಚುನಾವಣಾ ಕಾನೂನು ಹಾಗೂ ಅನ್ವಯವಾಗುವ ಇತರ ಕಾನೂನುಗಳಡಿ ಕ್ರಮ ಕೈಗೊಳ್ಳಬೇಕು' ಎಂದರು.

ಕಾಂಗ್ರೆಸ್ ಮುಖಂಡ ಇರ್ಫಾನ್ ಶೇಖ್, ಅಬ್ದುಲ್ ರಜಾಕ್ ಹೊರ್ತಿ, ವೈಜನಾಥ ಕರ್ಪೂರಮಠ, ಶಬ್ಬೀರ್ ಅಹ್ಮದ್ ಜಹಾಗೀರದಾರ್, ಆಜಾದ್ ಪಟೇಲ್, ಚಾಂದಸಾಬ್ ಗಡಗಲಾವ, ಆಫ್ತಾಬ್ ಖಾದ್ರಿ, ಅಬುಬಕರ್ ಅಂಬಾರಖಾನೆ, ಫಯಾಜ್ ಕಲಾದಗಿ ಇದ್ದರು.

ಎಲ್ಲ ಸಂಪತ್ತಿಗಿಂತ ಆರೋಗ್ಯ ಸಂಪತ್ತು ದೊಡ್ಡದು:ಡಾ.ಕಾರ್ಚಿ



ತಾಳಿಕೋಟೆ: ಎಲ್ಲ ಸಂಪತ್ತಿಗಿಂತ ಆರೋಗ್ಯ ಸಂಪತ್ತು ದೊಡ್ಡದು. ಆರೋಗ್ಯ ಉತ್ತಮವಾಗಿದ್ದಾಗ ಮಾತ್ರ ವ್ಯಕ್ತಿಯು ತನ್ನ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯ. ಪೊಲೀಸ್ ಸಿಬ್ಬಂದಿ ಹಗಲು–ರಾತ್ರಿ ಎನ್ನದೆ ನಿರಂತರವಾಗಿ ಸಾರ್ವಜನಿಕರ ಸೇವೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಕರ್ತವ್ಯದ ಒತ್ತಡದ ನಡುವೆಯೂ ತಮ್ಮ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದು ರೋಟರಿಯನ್ ಡಾ. ವ್ಹಿ.ಎಸ್.ಕಾರ್ಚಿ ಅವರು ಹೇಳಿದರು.

ತಾಳಿಕೋಟೆ ಪೊಲೀಸ್ ಠಾಣೆ ಆವರಣದಲ್ಲಿ ಪೊಲೀಸ್ ಸಿಬ್ಬಂದಿ ಹಾಗೂ ಅವರ ಕುಟುಂಬದವರಿಗಾಗಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು. ಪೊಲೀಸ್ ಸಿಬ್ಬಂದಿ ಸಾರ್ವಜನಿಕರ ಸುರಕ್ಷತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಮಹತ್ವದ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಕರ್ತವ್ಯದ ಸಂದರ್ಭದಲ್ಲಿ ವಿವಿಧ ರೀತಿಯ ಒತ್ತಡ ಹಾಗೂ ಸವಾಲುಗಳನ್ನು ಎದುರಿಸುವ ಅವರು ತಮ್ಮ ವೈಯಕ್ತಿಕ ಆರೋಗ್ಯವನ್ನು ನಿರ್ಲಕ್ಷಿಸಬಾರದು. ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದರ ಜೊತೆಗೆ ಉತ್ತಮ ಆಹಾರ ಪದ್ಧತಿ, ವ್ಯಾಯಾಮ ಹಾಗೂ ಆರೋಗ್ಯಕರ ಜೀವನಶೈಲಿಗೆ ಆದ್ಯತೆ ನೀಡಬೇಕು ಎಂದು ಡಾ. ಕಾರ್ಚಿ ಸಲಹೆ ನೀಡಿ–ದರು. ಆರೋಗ್ಯ ಸಮಸ್ಯೆ ಕಾಣಿಸಿಕೊಂಡ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ಮುನ್ನೆಚ್ಚರಿಕೆಯಾಗಿ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ಸೂಕ್ತ ವೈದ್ಯಕೀಯ ಸಲಹೆ ಹಾಗೂ ಚಿಕಿತ್ಸೆ ಪಡೆದುಕೊಂಡರೆ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಗಂಭೀರ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟಬಹುದು ಎಂದು ಅವರು ತಿಳಿಸಿದರು.

ರೋಟರಿ ಸಂಸ್ಥೆಯ ಅಧ್ಯಕ್ಷ ಘನಶಾಮ ಚವ್ಹಾಣ ಹಾಗೂ ಡಾ.ಎ.ಎ.ನಾಲಬಂದ ಅವರು ಮಾತನಾಡಿ, ಸಮಾಜ ಸೇವೆಯ ಭಾಗವಾಗಿ ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ನೀಡುವುದು ರೋಟರಿ ಸಂಸ್ಥೆಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಪೊಲೀಸ್ ಸಿಬ್ಬಂದಿ ದಿನನಿತ್ಯ ಸಾರ್ವಜನಿಕರಿಗಾಗಿ ಸೇವೆ ಸಲ್ಲಿಸುತ್ತಿದ್ದು, ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಈ ಹಿನ್ನೆಲೆಯಲ್ಲಿ ಪೊಲೀಸ್ ಸಿಬ್ಬಂದಿ ಹಾಗೂ ಅವರ ಕುಟುಂಬದವರಿಗಾಗಿ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಆರೋಗ್ಯ ತಪಾಸಣೆಯಿಂದ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಲು ಸಾಧ್ಯವಾಗುತ್ತದೆ.

ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಜಾಗೃತರಾಗಬೇಕು. ಮುಂದಿನ ದಿನಗಳಲ್ಲಿಯೂ ರೋಟರಿ ಸಂಸ್ಥೆಯ ವತಿಯಿಂದ ಸಾರ್ವಜನಿಕರಿಗೆ ಅನುಕೂಲವಾಗುವಂತಹ ವಿವಿಧ ಆರೋಗ್ಯ ಹಾಗೂ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಘನಶಾಮ ಚವ್ಹಾಣ ತಿಳಿಸಿದರು.

60ಕ್ಕೂ ಹೆಚ್ಚು ಸಿಬ್ಬಂದಿ, ಕುಟುಂಬಸ್ಥರ ತಪಾಸಣೆ

ಶಿಬಿರದಲ್ಲಿ ತಾಳಿಕೋಟೆ ಪೊಲೀಸ್ ಠಾಣೆ–ಯ 60ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಭಾಗವಹಿಸಿ ವಿವಿಧ ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಪಿಎಸ್ಐ ಶ್ರೀಮತಿ ಜ್ಯೋತಿ ಖೋತ್ ಅವರು ಮಾತನಾಡಿದರು.

ಶಿಬಿರದಲ್ಲಿ ರೋಟರಿಯನ್ ಡಾ. ಆನಂದ ಭಟ್, ಡಾ. ಎ.ಎನ್. ನಾಲಬಂದ, ಅಶೋಕ ಬಳಗಾನೂರ, ಪ್ರಭುಗೌಡ ಮದರಕಲ್ಲ, ಚಿನ್ನಪ್ಪಗೌಡ ಮಾಳಿ, ಮಲ್ಲಿಕಾರ್ಜುನ ಕತ್ತಿ, ಮುರುಗೆಪ್ಪ ಸರಶೆಟ್ಟಿ, ರಾಜು ಸಜ್ಜನ, ಮಲ್ಲಿಕಾರ್ಜುನ ನಾಗರಾಳ, ಶ್ರೀನಿವಾಸ ಸೋನಾರ, ಶಾಮ ಹಂಚಾಟೆ, ಸಂಜೀವ ಹೇರಿ, ಬಸವರಾಜ ಕುಂಭಾರ, ಸುಭಾಸ ಬಬಲೇಶ್ವರ, ಪಿಎಸ್ಐ ಎಸ್.ಎಂ.ಪಡಶೆಟ್ಟಿ, ಪ್ರಸೂತಿ ತಜ್ಞರಾದ ಡಾ. ಗಂಗಾಂಬಿಕಾ ಪಾಟೀಲ, ಡಾ. ಶಾಂತಾ ಇಬ್ರಾಹಿಂಪುರ, ದಂತ ವೈದ್ಯ ಡಾ. ಜಾಕೀರ ಅಹ್ಮದ್ ಸೇರಿದಂತೆ ವಿವಿಧ ವೈದ್ಯರು ಭಾಗವಹಿಸಿ ಸೇವೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ, ವೈದ್ಯರು ಹಾಗೂ ರೋಟರಿ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ರೋಟರಿಯನ್ ಅಶೋಕ ಬಳಗಾನೂರ ನಿರೂಪಿಸಿದರು.

ಮಿಣಜಗಿ ಮಾರ್ಗದೆಡೆಗೆ ಬಸ್ ಸಂಚಾರಕ್ಕೆ ಒತ್ತಾಯಿಸಿ ಮನವಿ



ತಾಳಿಕೋಟೆ: ತಾಳಿಕೋಟೆ ಬಸ್ ಘಟಕದಿಂದ ಮಿಣಜಗಿ ಗ್ರಾಮದ ಮಾರ್ಗವಾಗಿ ಮುದ್ದೇಬಿಹಾಳಕ್ಕೆ ಸಂಚರಿಸುತ್ತಿದ್ದ ಸಾರಿಗೆ ಬಸ್‌ಗಳು ಮತ್ತು ಮುದ್ದೇಬಿಹಾಳದಿಂದ ತಾಳಿಕೋಟೆಗೆ ಆಗಮಿಸುವ ಬಸ್ಸುಗಳು ಇದೀಗ ಮಿಣಜಗಿ ಮಾರ್ಗವನ್ನು ಬದಲಿಸಿ ಹಡಗಿನಾಳ ಮಾರ್ಗವಾಗಿ ಸಂಚರಿಸುತ್ತಿರುವುದರಿಂದ ಗ್ರಾಮಸ್ಥರಿಗೆ ತೀವ್ರ ಅನಾನುಕೂಲ ಉಂಟಾಗುತ್ತಿದೆ.ಈಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಿ ಮಿಣಜಗಿ ಮಾರ್ಗದೆಡೆಗೆ ಬಸ್ ಸಂಚಾರ ಪುನ ಮುಂದುವರಿಸುವಂತೆ ಆಗ್ರಹಿಸಿ ಮಿಣಜಗಿ ಗ್ರಾಮಸ್ಥರು ಸೋಮವಾರರಂದು ಬಸ್ ಘಟಕ ವ್ಯವಸ್ಥಾಪಕ ಪಿ.ಕೆ. ಜಾಧವ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಮುಖಂಡ ವೀರೇಶ ಬಾಗೇವಾಡಿ ಮಾತನಾಡಿ, ಮಿಣಜಗಿ ಗ್ರಾಮವು ಪ್ರಮುಖ ಉದ್ಯೋಗ ಕೇಂದ್ರವಾಗಿದ್ದು, ಪ್ರತಿದಿನ ನೂರಾರು ಕೂಲಿ ಕಾರ್ಮಿಕರು ವಿವಿಧ ಗ್ರಾಮಗಳಿಂದ ಇಲ್ಲಿಗೆ ಕೆಲಸಕ್ಕಾಗಿ ಆಗಮಿಸುತ್ತಾರೆ. ಬಸ್‌ಗಳ ಮಾರ್ಗ ಬದಲಾವಣೆಯಿಂದ ಕಾರ್ಮಿಕರು ಮಾತ್ರವಲ್ಲದೆ ಮಿಣಜಗಿಯಿಂದ ತಾಳಿಕೋಟೆ ಪಟ್ಟಣ–ಕ್ಕೆ ತೆರಳುವ ವಿದ್ಯಾರ್ಥಿಗಳು, ಮಹಿಳೆಯರು, ವೃದ್ಧರು ಹಾಗೂ ಉದ್ಯೋಗಸ್ಥರು ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ಹೇಳಿದರು.

ಈ ಕುರಿತು ಈಗಾಗಲೇ ಸಾರಿಗೆ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಸೂಕ್ತ ಸ್ಪಂದನೆ ದೊರೆತಿಲ್ಲ. ಅಲ್ಲದೆ, ವಿಜಯಪುರದಿಂದ ತಾಳಿಕೋಟೆಗೆ ಸಂಚರಿಸುವ ಬಸ್‌ಗಳು ಮಿಣಜಗಿ ಕ್ರಾಸ್‌ನಲ್ಲಿ ನಿಲುಗಡೆ ನೀಡದಿರುವುದರಿಂದ ಸುತ್ತಮುತ್ತಲಿನ ಗ್ರಾಮಗಳಿಂದ ಮಿಣಜಗಿಗೆ ಕೆಲಸಕ್ಕಾಗಿ ಬರುವ ಕೂಲಿ ಕಾರ್ಮಿಕರಿಗೂ ತೊಂದ–ರೆಯಾಗುತ್ತಿದೆ.

ಆದ್ದರಿಂದ ಮಿಣಜಗಿ ಮಾರ್ಗದಲ್ಲಿ ಬಸ್ ಸಂಚಾರ ಪುನರಾರಂಭಿಸುವುದು ಹಾಗೂ ಮಿಣಜಗಿ ಕ್ರಾಸ್‌ನಲ್ಲಿ ಬಸ್‌ಗಳಿಗೆ ನಿಲುಗಡೆ ಕಲ್ಪಿಸುವುದು ಸೇರಿದಂತೆ ಎರಡೂ ಸಮಸ್ಯೆಗಳನ್ನು ಶೀಘ್ರ ಪರಿಹರಿಸಬೇಕು ಎಂದು ಒತ್ತಾಯಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಘಟಕ ವ್ಯವಸ್ಥಾಪಕ ಪಿ.ಕೆ. ಜಾಧವ ಅವರು, ಮಿಣಜಗಿ ಗ್ರಾಮಸ್ಥರು ಬಸ್ ನಿಲುಗಡೆ ಹಾಗೂ ಮಾರ್ಗದ ಸಮಸ್ಯೆ ಕುರಿತು ಮನವಿ ಸಲ್ಲಿಸಿದ್ದಾರೆ. ಈಗಾಗಲೇ ಈ ಕುರಿತು ಕ್ರಮ ಕೈಗೊಳ್ಳುವಂತೆ ಸಂಚಾರ ನಿಯಂತ್ರಕರಿಗೆ ಸೂಚನೆ ನೀಡಿದ್ದು, ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮದ ಪ್ರಮುಖರಾದ ಸಂಗನಗೌಡ ಪಾಟೀಲ, ಐ.ವಾಯ್.ಹಿರೇಮಠ, ಎ.ಎಸ್. ಬಿರಾದಾರ, ಎಂ.ಜೆ. ಪಾಟೀಲ, ಕೆ.ಎ. ಪಾಟೀಲ, ಸಿ.ಎಂ. ಸಜ್ಜನ, ಐ.ಎಂ. ಯಾಳವಾರ, ಶರಣಗೌಡ ಬಿರಾದಾರ, ಈರಣ್ಣ ಮದರಿ, ಸೋಮು ನಾಯ್ಕೋಡಿ, ಎಂ.ಆರ್. ಅಕ್ಕಿ, ಬಿ.ಹೆಚ್. ಬಶೆಟ್ಟಿ, ಕೆ.ಎಂ. ಹಗರಟಗಿ, ರಾಮು ಜಂಬಗಿ, ಮಹಾಂತೇಶ ಮಂಗ್ಯಾಳ, ಶಿವು ಮಡಿಕೇಶ್ವರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

PUBLIC FAST KANNADA DAILY NEWS PAPER
ದಿನಾಂಕ : 09–10–2026

ಬಂಡಾಯ ಸಾಹಿತ್ಯದಲ್ಲೂ ಜೀವಸೆಲೆ ಉಳಿಸಿಕೊಂಡ ಗವಿಸಿದ್ದ ಎನ್.ಬಳ್ಳಾರಿ



ಕೊಪ್ಪಳ: 'ಬಂಡಾಯ ಸಾಹಿತ್ಯ ಉತ್ತುಂಗವಾಗಿದ್ದ ದಿನಗಳಲ್ಲಿ ಎಲ್ಲೆಡೆ ಕ್ರಾಂತಿಯ ಗೀತೆಗಳು ಮೊಳಗುತ್ತಿದ್ದವು. ಅಂಥ ಬಿಸಿ ಕಾಲದಲ್ಲಿಯೂ ಗವಿಸಿದ್ದ ಎನ್.ಬಳ್ಳಾರಿ ಅವರು ತಣ್ಣನೆಯ ಸಾಹಿತ್ಯ ಬರೆದು ಜೀವಸೆಲೆ ಉಳಿಸಿಕೊಂಡಿದ್ದರು. ಮಾನವೀಯತೆ ಜೀವಿಸಿದ ಶ್ರೇಷ್ಠ ಕವಿ ಅವರು' ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್.ದ್ವಾರಕನಾಥ ಹೇಳಿದರು.

ಕವಿ ಗವಿಸಿದ್ದ ಎನ್.ಬಳ್ಳಾರಿ ಸಾಹಿತ್ಯ, ಸಾಂಸ್ಕೃತಿಕ ಕಲಾ ಹಾಗೂ ಗ್ರಾಮೀಣಾಭಿವೃದ್ಧಿ ಸೇವಾ ಸಂಸ್ಥೆ, ಕೊಪ್ಪಳದ ತಳಮಳ ಪ್ರಕಾಶನ ಸಹಯೋಗದಲ್ಲಿ ಭಾನುವಾರ ನಗರದಲ್ಲಿ ನಡೆದ ಗವಿಸಿದ್ದ ಎನ್.ಬಳ್ಳಾರಿ ಸಾಹಿತ್ಯೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಬಂಡಾಯ ಸಾಹಿತ್ಯದ ಕಾಲದಲ್ಲಿಯೂ ಅವರು ಕ್ರಾಂತಿಗೀತೆ ಹಾಗೂ ಪ್ರೇಮಗೀತೆ ಎರಡೂ ಬರೆಯುತ್ತಿದ್ದರು' ಎಂದು ಸ್ಮರಿಸಿದರು.

ಉತ್ತುಂಗದಲ್ಲಿದ್ದ ರೈತ ಚಳವಳಿ, ದಲಿತ ಹಾಗೂ ಕನ್ನಡ ಚಳವಳಿಗಳಿಂದ ಬಂಡಾಯದ ಸಾಹಿತ್ಯ ಉನ್ನತಕ್ಕೆ ಏರಿತ್ತು. ಆಗ ನಾವು ಮಾಡುತ್ತಿದ್ದ ಪ್ರತಿ ಹೋರಾಟ, ಸಾಹಿತ್ಯ ಕೃಷಿಯಲ್ಲಿ ಬಂಡಾಯವೇ ಪ್ರಧಾನವಾಗಿ ಇರುತ್ತಿತ್ತು. ರಾಜ್ಯದ ಆಂಧ್ರ ಗಡಿಭಾಗದಲ್ಲಿ ವ್ಯಾಪಕವಾಗಿದ್ದ ತೆಲುಗಿನ ಕ್ರಾಂತಿಕಾರಿ ಸಾಹಿತ್ಯ ನಮ್ಮ ಮೇಲೆ ಗಾಢವಾದ ಪರಿಣಾಮ ಬೀರಿತು. ಇಂಥ ಸಮಯದಲ್ಲಿಯೂ ಗವಿಸಿದ್ದ ಎನ್.ಬಳ್ಳಾರಿ ಅವರು ತಣ್ಣನೆಯ ಸಾಹಿತ್ಯ ಬರೆದರು' ಎಂದು ಹೇಳಿದರು.

ಕೇಂದ್ರ ಗೃಹ ಇಲಾಖೆಯ ಅಧಿಕಾರಿ ಹಾಗೂ ಅನುವಾದಕ ಸಂಜಯ್ ಬೊರುಡೆ, ಬಸವ ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ಬಸವರಾಜ ಬಳ್ಳೊಳ್ಳಿ, ಬಂಡಾಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು, ಬಳ್ಳಾರಿ ವಿಭಾಗೀಯ ಕಾನೂನು ಅಧಿಕಾರಿ ಬಿ.ಎಸ್. ಪಾಟೀಲ, ಕವಿ ಮಾಲಾ ಬಡಿಗೇರ, ಸಾಹಿತ್ಯೋತ್ಸವ ಸಮಿತಿ ಸಂಚಾಲಕ ಮಹೇಶ ಬಳ್ಳಾರಿ, ಪ್ರಕಾಶ ಬಳ್ಳಾರಿ, ರಾಜೇಶ ಬಳ್ಳಾರಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಎಸ್‌ಐಆರ್: ಎಸ್‌ಐಟಿ ತನಿಖೆಗೆ ಆಗ್ರಹಿಸಿ ಪ್ರತಿಭಟನೆ




ಕೊಪ್ಪಳ: ಎಸ್‌ಐಆರ್ ಪ್ರಕ್ರಿಯೆಯಲ್ಲಿ ಅಲ್ಪಸಂಖ್ಯಾತರು, ದಲಿತರು, ಹಿಂದುಳಿದ ವರ್ಗಗಳು ಹಾಗೂ ಬಿಜೆಪಿಯೇತರ ಮತದಾರರನ್ನು ಗುರಿಯಾಗಿಸಿಕೊಂಡಿರುವ ಕ್ರಿಮಿನಲ್ ಒಳಸಂಚು ಮತ್ತು ಧರ್ಮದ್ವೇಷದ ಆರೋಪಗಳ ಕುರಿತು ಸಮಗ್ರ ತನಿಖೆ ನಡೆಸಬೇಕು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಎಸ್‌ಡಿಪಿಐ ಸಂಘಟನೆ ಶನಿವಾರ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿತು.

ಅರ್ಹ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕುವ ಉದ್ದೇಶದಿಂದ ಫಾರ್ಮ್?7 ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿವೆ. ಈ ಆರೋಪಗಳ ಕುರಿತು ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಕೆಲವು ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಫಾರ್ಮ್?7 ಅರ್ಜಿಗಳು ಸಲ್ಲಿಕೆಯಾಗಿವೆ. ಒಂದೇ ರೀತಿಯ ಮಾಹಿತಿಯೊಂದಿಗೆ ಸಾಮೂಹಿಕ ಅರ್ಜಿಗಳು ಸಲ್ಲಿಕೆಯಾಗಿರುವ ಆರೋಪಗಳು ಹಾಗೂ ಮತದಾರರ ವಿವರಗಳನ್ನು ಅವರ ಅರಿವು ಅಥವಾ ಅನುಮತಿಯಿಲ್ಲದೆ ಬಳಸಲಾಗಿದೆ ಎಂಬ ದೂರುಗಳು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ ಎಂದು ಹೇಳಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ಯೂಸುಫ್ ಮೋದಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೈಯದ್ ಸಾಖೀಬ್, ನಿಜಾಮುದ್ದೀನ್ ಮಾಳೆಕೊಪ್ಪ, ಕೊಪ್ಪಳ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಸಲೀಂ ಖಾದ್ರಿ, ಕಾರ್ಯದರ್ಶಿ ಮೊಹಮ್ಮದ್ ಸಾಧಿಕ್ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಸೇವಾ ಸಂಕಲ್ಪ ಅಭಿಯಾನ; ಆರೋಗ್ಯ ತಪಾಸಣೆ ಶಿಬಿರಕ್ಕೆ ಚಾಲನೆ



ಯಲಬುರ್ಗಾ: 'ದೇಶದಲ್ಲಿ ದೀರ್ಘಕಾಲ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆಗೆ ಪಾತ್ರರಾಗಿರುವ ನರೇಂದ್ರ ಮೋದಿಯವರ ನಾಯಕತ್ವವು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ' ಎಂದು ಬಿಜೆಪಿ ಜಿಲ್ಲಾಧ್ಯಕ್ಷ ನವೀನ ಕುಮಾರ ಗುಳಗಣ್ಣನವರ ಹೇಳಿದರು.

ತಾಲ್ಲೂಕಿನ ಬೇವೂರು ಗ್ರಾಮದ ಬುದ್ಧ ಬಸವ ಅಂಬೇಡ್ಕರ್ ಭವನದಲ್ಲಿ ಬಿಜೆಪಿ ಪಕ್ಷದ ವತಿಯಿಂದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಸಾರ್ವಜನಿಕ ಜನಸೇವಾ ಮತ್ತು ಸುಶಾಸನದ 25 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ 'ಸೇವಾ ಸಂಕಲ್ಪ ಅಭಿಯಾನ'ದ ಸೇವೆಯ ಪ್ರಯುಕ್ತ ಸಪ್ತಗಿರಿ ಆಸ್ಪತ್ರೆ ಬೆಂಗಳೂರು ಹಾಗೂ ಜನನಿ ಗ್ರೂಫ್ ಆಫ್ ಇನ್‌ಸ್ಟಿಟ್ಯೂಟ್ಸ್ ಯಲಬುರ್ಗಾ ಇವರ ಸಹಯೋಗದಲ್ಲಿ ಬೃಹತ್ ಆರೋಗ್ಯ ಉಚಿತ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರಾಸ್ತಾವಿಕವಾಗಿ ಡಾ.ಶಿವಣ್ಣ ವಾದಿ ಮಾತನಾಡಿ, 'ಸಪ್ತಗಿರಿ ಆಸ್ಪತ್ರೆಯ ವತಿಯಿಂದ ನಿರಂತರವಾಗಿ ಹತ್ತು ವರ್ಷಗಳ ಕಾಲ ಬೃಹತ್ ಆರೋಗ್ಯ ಉಚಿತ ತಪಾಸಣೆ ಸೇವೆ ಸಲ್ಲಿಸುತ್ತಿದೆ. ಕಳೆದ ವರ್ಷ ತಪಾಸಣೆಯಲ್ಲಿ 15ಕ್ಕಿಂತಲೂ ಹೆಚ್ಚು ಜನರ ವಿವಿಧ ಕಾಯಿಲೆಗಳ ಶಸ್ತ್ರಚಿಕಿತ್ಸೆ ಮಾಡಿಸಲಾಯಿತು' ಎಂದು ತಿಳಿಸಿದರು.

ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಯ ವೈದ್ಯರಾದ ಡಾ.ನಿಖಿಲ್, ಡಾ.ವಿಕ್ರಮ್, ಡಾ.ಹರ್ಷಾ, ಡಾ.ಸತೀಶರಡ್ಡಿ ಭಾಗವಹಿಸಿದ್ದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅರವಿಂದಗೌಡ, ಜಿಲ್ಲಾ ಕಾರ್ಯದರ್ಶಿ ಸೋಮಶೇಖರಗೌಡ ಪಾಟೀಲ, ವಿರೂಪಾಕ್ಷಿ ಹುರಳಿ, ಬಸವರಾಜ ಕೋಳಜಿ, ದುಂಡಪ್ಪ ಕೋಳಜಿ, ಶಿವಾನಂದ ಹಿರೇಮನಿ, ಕಲ್ಲಪ್ಪ ಈಳಿಗೇರ, ಲಿಂಗಜ್ಜ ಕೊಳಜಿ, ಹೇಮಂತ, ಶಂಕ್ರಪ್ಪ ತುಪ್ಪದ, ಶರಣಪ್ಪ ಪಳೋಟಿ, ಶರಣಪ್ಪ ಮದ್ದೂರು, ಬಸವರಾಜ ಜಾಲಿಜಾಳ, ಭೀಮೇಶ ಕರಡಿ ಸೇರಿದಂತೆ ಅನೇಕರು ಹಾಜರಿದ್ದರು.

ಬೇರೆ ಪಕ್ಷಕ್ಕೆ ಹೋಗುವ ಯೋಚನೆಯಿಲ್ಲ : ಇಕ್ಬಾಲ್ ಅನ್ಸಾರಿ ಆಡಿಯೊ ಹೇಳಿಕೆ



ಗಂಗಾವತಿ: ತಮ್ಮ ಕಾಂಗ್ರೆಸ್ ಪಕ್ಷದ ಪ್ರಮುಖ ಕಾರ್ಯಕ್ರಮಗಳಿಂದ ದೂರ ಉಳಿದಿರುವ ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಆಡಿಯೊ ಹೇಳಿಕೆಯಲ್ಲಿ ಮತ್ತೆ ಸಕ್ರಿಯರಾಗಿದ್ದಾರೆ.

ಶುಕ್ರವಾರ ಕೊಪ್ಪಳದಲ್ಲಿ ನಡೆದ ಪಕ್ಷದ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ನಾಗಪ್ಪ ಅವರ ಅಧಿಕಾರ ಪದಗ್ರಹಣ ಕಾರ್ಯಕ್ರಮಕ್ಕೆ ಪಕ್ಷದ ಜಿಲ್ಲೆಯ ಬಹುತೇಕ ನಾಯಕರು ಬಂದಿದ್ದರೂ ಅನ್ಸಾರಿ ಗೈರಾಗಿದ್ದರು. ಇದರ ಬಗ್ಗೆ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು.

ತಮ್ಮ ವಿರುದ್ಧ ಹೀಗೆ ವರದಿಗಳು ಬಂದಾಗಲೆಲ್ಲ ಆಡಿಯೊ ಹೇಳಿಕೆ ಬಿಡುಗಡೆ ಮಾಡುವ ಅನ್ಸಾರಿ ಈ ಬಾರಿಯೂ ಆಡಿಯೊ ಬಿಡುಗಡೆ ಮಾಡಿ 'ಜೆಡಿಎಸ್ ಸೇರುತ್ತೇನೆ ಎಂದು ವರದಿಯಾಗುತ್ತಿದೆ. ನಾನು ಕಾಂಗ್ರೆಸ್ ಬಿಟ್ಟು ಎಲ್ಲಿಯೂ ಹೋಗುವುದಿಲ್ಲ. ಬೇ–ರೊಂದು ಕೆಲಸವಿದ್ದ ಕಾರಣ ಪಕ್ಷದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿಲ್ಲ' ಎಂದು ಹೇಳಿದ್ದಾರೆ.

ನನಗೆ ಕಾಂಗ್ರೆಸ್ ಪಕ್ಷದ ಬಗ್ಗೆ ಬೇಸರವಿಲ್ಲ, ಪಕ್ಷದ ನಾಯಕರ ಬಗ್ಗೆ ಮಾತ್ರ ನನ್ನ ಬೇಸರ. ಸರ್ಕಾರದಿಂದ ಪಕ್ಷದ ಕಾರ್ಯಕರ್ತರಿಗೆ ಹಾಗೂ ಸಾರ್ವಜನಿಕರಿಗೆ ಯೋಜನೆಗಳು ತಲುಪಬೇಕು. ಬೇರೊಂದು ಪಕ್ಷ ಸೇರುತ್ತೇನೆ ಎಂದು ಎಲ್ಲಿಯೂ ಹೇಳಿಲ್ಲ' ಎಂದು ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಕಾಂಗ್ರೆಸ್ ನಾಯಕರು ಒಂದು ಕಡೆ ಇದ್ದರೆ ಅನ್ಸಾರಿ ಮತ್ತೊಂದು ಕಡೆ ಇದ್ದಾರೆ ಎನ್ನುವುದು ಸತ್ಯವಾದ ಮಾತು ಇರಬಹುದು. ಸತ್ಯ ಯಾವಾಗಲೂ ಒಂಟಿಯಾಗಿರುತ್ತದೆ.

ಅದಕ್ಕಾಗಿ ಒಂಟಿಯಾಗಿದ್ದೇನೆ ಎಂದು ಹೇಳಲು ಯಾವುದೇ ಮುಜುಗರವಿಲ್ಲ' ಎಂದು ಆಡಿಯೊ ಮೂಲಕ ಹೇಳಿದ್ದಾರೆ.

ಹೆಚ್ಚು ಕ್ರಿಮಿನಾಶಕ ಬಳಸದಿರಲು ಕೃಷಿ ಅಧಿಕಾರಿ ಸಲಹೆ



ಕಾರಟಗಿ: 'ಕ್ರಿಮಿನಾಶಕ ಬಳಸುವಾಗ ರೈತರು ಅಗತ್ಯ ಮುಂಜಾಗ್ರತಾ ಕ್ರಮಗಳು ಕೈಗೊಳ್ಳಬೇಕು.

ಕ್ರಿಮಿನಾಶಕಗಳ ಅಸಮರ್ಪಕ ಬಳಕೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಅಪಾಯವಿದೆ. ಅಧಿಕ ಫಸಲಿನ ಆಸೆಯಿಂದ ಹೆಚ್ಚು ಕ್ರಿಮಿನಾಶಕ ಬಳಸಬೇಡಿ' ಎಂದು ಕೃಷಿ ಅಧಿಕಾರಿ ಬೀರಪ್ಪ ಜಮಾಪುರ ರೈತರಿಗೆ ಸಲಹೆ ನೀಡಿದರು.

ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಸೋಮವಾರ ರೈತರಿಗೆ ರಿಯಾಯಿತಿ ದರದಲ್ಲಿ ಕಡಲೆ ಬೀಜ ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕ್ರಿಮಿನಾಶಕ ಸಿಂಪಡಿಸುವಾಗ ಸುರಕ್ಷತಾ ಸಾಧನಗಳನ್ನು ಕಡ್ಡಾಯವಾಗಿ ಬಳಸಬೇಕು. ಅಗತ್ಯವಿರುವ ಪ್ರಮಾಣದಲ್ಲೇ ಔಷಧ ಬಳಸಬೇಕು.

ಕಡಲೆ ಬೀಜ ಬಿತ್ತನೆಗೆ ಮುನ್ನ ಬೀಜೋಪಚಾರ ಮಾಡುವ ವಿಧಾನ, ಬಿತ್ತನೆ ಪ್ರಮಾಣ ಹಾಗೂ ಸೂಕ್ತ ಕೃಷಿ ಪದ್ಧತಿಗಳ ಕುರಿತು ರೈತರಿಗೆ ಮಾಹಿತಿ ನೀಡಿ, ಕೀಟಬಾಧೆಗೆ ಕೃಷಿ ತಜ್ಞರ ಸಲಹೆ ಪಡೆದು ಸೂಕ್ತ ಕೀಟನಾಶಕ ಬಳಸಬೇಕು ಎಂದು ತಿಳಿಸಿದರು.

ಕೃಷಿಕ ಸಮಾಜದ ತಾಲ್ಲೂಕು ಅಧ್ಯಕ್ಷ ಪಂಪನಗೌಡ ಹೊಸಮನಿ, ಕೃಷಿಕ ಸಮಾಜದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರಗೌಡ ಮರೋಳ ಬೆನ್ನೂರು, ಪದಾಧಿಕಾರಿಗಳಾದ ಪಾಲಾಕ್ಷಪ್ಪ ಕೆಂಡದ, ಬಾಲಪ್ಪ ಆರಾಪುರ, ಜಗದೀಶಪ್ಪ ಹಾಸಗಲ್, ಸೋಮನಾಳ ರೈತರಾದ ಪಂಪಾಪತಿ ಶೀಲವಂತರ್, ದೊಡ್ಡ ಬಸಪ್ಪ, ದೊಡ್ಡನಗೌಡ ಯರಡೋಣಾ, ವೀರೇಶಪ್ಪ ತಿಮ್ಮಾಪುರ, ಸಿದ್ದಲಿಂಗಪ್ಪ, ಸುರೇಶ ದೇವಿಕ್ಯಾಂಪ್, ಮನೋಹರಗೌಡ, ಕೃಷಿ ಇಲಾಖೆ ಸಿಬ್ಬಂದಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿರೋಧಿಗಳಿಗೆ ನಾನೇ ರೈಲು ಹತ್ತಿಸಿದ್ದೇನೆ



ಕುಕನೂರು: 'ರಾಯರಡ್ಡಿ ಅವರು ಬರೀ ರೀಲು ಬಿಡುತ್ತಾರೆ ಎಂದು ಹೇಳುವ ವಿರೋಧಿಗಳಿಗೆ ನಾನೇ ರೈಲು ಹತ್ತಿಸಿದ್ದೇನೆ' ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ ಹೇಳಿದರು.

ತಾಲ್ಲೂಕಿನ ಇಟಗಿ ಗ್ರಾಮದಲ್ಲಿ ಆಯೋಜಿಸಿದ್ದ ಜನ ಸಂದರ್ಶನ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯದ ಖಜಾನೆಯನ್ನೆಲ್ಲಾ ಖಾಲಿ ಮಾಡಿದೆ ಎಂದು ನಮ್ಮ ವಿರುದ್ಧ ಟೀಕೆ ಮಾಡುತ್ತಿದ್ದು ಅವುಗಳಿಗೆ ನಮ್ಮ ಅಭಿವೃದ್ಧಿ ಕಾರ್ಯಗಳ ಮುಖಾಂತರ ಉತ್ತರ ಕೊಟ್ಟಿದ್ದೇವೆ. ಮಧ್ಯದಲ್ಲಿ ಯಾವುದೇ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವ ಮಾತೇ ಇಲ್ಲ ಜೊತೆಗೆ ಹೊಸ ಯೋಜನೆಯನ್ನು ಸಹ ಜಾರಿಗೆ ತರುವ ಪ್ರಯತ್ನ ಮಾಡುತ್ತಿದ್ದೇವೆ' ಎಂದು ಹೇಳಿದರು.

ರಾಜ್ಯ ಸರ್ಕಾರದ ಕೆಲಸಗಳನ್ನು ಟೀಕಿಸುವ ರಾಜ್ಯ ಬಿಜೆಪಿ ನಾಯಕರು ನಿಮ್ಮ ಮೋದಿಯವರು ರಾಜ್ಯಕ್ಕೆ ಏನು ಕೊಡುಗೆ ನೀಡಿದ್ದಾರೆ? ರಾಜ್ಯ ಸರ್ಕಾರದಿಂದ ಕೊಡಬೇಕಾದ ತೆರಿಗೆ ಹಣವನ್ನು ತೆಗೆದುಕೊಂಡು ಬರಗಾಲಕ್ಕೆ ಹಣವನ್ನು ನೀಡಿ ಎಂದರೆ ಕೊಡಲು ಹಿಂದೇಟು ಹಾಕುತ್ತಿದ್ದಾರೆ. ಅದಕ್ಕೆ ರಾಜ್ಯ ಬಿಜೆಪಿ ನಾಯಕರು ನಿಮ್ಮ ಮೋದಿಜಿ ಅವರಿಗೆ ಹೇಳಿ ರೈತರಿಗೆ ಬರಗಾಲದ ಪರಿಹಾರವನ್ನು ನೀಡಲು ಒತ್ತಾಯಿಸಿ ಎಂದರೆ ಬರುತ್ತಿಲ್ಲ' ಎಂದರು.

ಕೇವಲ ಶ್ರೀರಾಮ್ ಜೈರಾಮ್ ಎಂದು ಕುಂಕುಮವನ್ನು ಧರಿಸಿ ಕೇಸರಿ ಶಾಲನ್ನು ಹಾಕಿಕೊಂಡರೆ ಅಭಿವೃದ್ಧಿಯಾಗುತ್ತದೆಯೇ' ಎಂದು ಪ್ರಶ್ನಿಸಿದರು.

ಡಿಸೆಂಬರ್ ವೇಳೆಗೆ ತಾಲ್ಲೂಕ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳು ಬರಲಿದ್ದು ಅದರಲ್ಲಿ ನಮ್ಮ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ' ಎಂದರು.

ಯಂಕಣ್ಣ ಯರಾಶಿ, ಹನುಮಂತಗೌಡ ಚಂಡೂರ್, ಸಂಗಮೇಶ್ ಗುತ್ತಿ, ರೆಹಮಾನ್ ಸಾಬ್ ಮಕಪ್ಪವರ್, ಮಹೇಶ್ ಇಟಗಿ, ಮಂಜುನಾಥ್ ಕಡೆಮನಿ ಇದ್ದರು.

ಕನಿಷ್ಠ ವೇತನ, ಪಿಂಚಣಿ ಜಾರಿಗೆ ಅಕ್ಷರ ದಾಸೋಹ ನೌಕರರ ಆಗ್ರಹ



ಕನಕಗಿರಿ: 'ಅಕ್ಷರ ದಾಸೋಹ ನೌಕರರು ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಸ್ಕೀಮ್ ಕಾರ್ಮಿಕರಾಗಿ ಗೌರವಧನದ ಆಧಾರದಲ್ಲಿ ದುಡಿಯುತ್ತಿದ್ದು, ಇಂದಿನ ದುಬಾರಿ ಜೀವನಕ್ಕೆ ತಕ್ಕ ವೇತನವಿಲ್ಲದೆ ಸಂಕಷ್ಟದಲ್ಲಿದ್ದಾರೆ' ಎಂದು ಸಿಐಟಿಯು ರಾಜ್ಯ ಉಪಾಧ್ಯಕ್ಷ ಮಂಟನಗೌಡ ನಾಡಗೌಡ ಹೇಳಿದರು.

ಪಟ್ಟಣದ ಶಾಸಕರ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಿಐಟಿಯು ಆಯೋಜಿಸಿದ್ದ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ತಾಲ್ಲೂಕು ಪ್ರಥಮ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಅಕ್ಷರ ದಾಸೋಹ ನೌಕರರು ಹಲವು ವರ್ಷಗಳಿಂದ ಕನಿಷ್ಠ ವೇತನ, ಪಿಂಚಣಿ ಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಾ ಬಂದಿದ್ದಾರೆ. ಹಲವು ಹಂತದ ಹೋರಾಟಗಳನ್ನು ನಡೆಸಿದರೂ ನಿರೀಕ್ಷಿತ ನ್ಯಾಯ ದೊರೆತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೌಕರರ ಬೇಡಿಕೆಗಳ ಬಗ್ಗೆ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿವೆ' ಎಂದು ದೂರಿದರು.

ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೆಲಸ ಮಾಡುವ ವಿವಿಧ ಕಾರ್ಮಿಕರಿಗೆ ದೊರೆಯುವ ವೇತನಕ್ಕೆ ಹೋಲಿಸಿದರೆ ಅಕ್ಷರ ದಾಸೋಹ ನೌಕರರಿಗೆ ನೀಡಲಾಗುತ್ತಿರುವ ಗೌರವಧನ ಅತ್ಯಂತ ಕಡಿಮೆಯಾಗಿದೆ' ಎಂದು ತಿಳಿಸಿದರು.


ಅಕ್ಷರ ದಾಸೋಹ ಬಿಸಿಯೂಟ ನೌಕರರಿಗೆ ಕನಿಷ್ಠ ವೇತನ ಮತ್ತು ಪಿಂಚಣಿ ಯೋಜನೆ ಜಾರಿಯಾಗಬೇಕು. ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಸರ್ಕಾರದ ಮೇಲೆ ಒತ್ತಡ ತರುವ ರೀತಿಯಲ್ಲಿ ಸಂಘಟಿತ ಹಾಗೂ ನಿರಂತರ ಹೋರಾಟ ನಡೆಸುವುದು ಅನಿವಾರ್ಯವಾಗಿದೆ' ಎಂದರು.

ಶಾಸಕರು ಮತ್ತು ಸಚಿವರಿಗೆ ದೊರೆಯುವ ವೇತನ, ಭತ್ಯೆ ಹಾಗೂ ಪಿಂಚಣಿ ವ್ಯವಸ್ಥೆಯನ್ನು ಉಲ್ಲೇಖಿಸಿದ ಅವರು, ಮಕ್ಕಳಿಗೆ ಬಿಸಿಯೂಟ ನೀಡುವಂತಹ ಮಹತ್ವದ ಕೆಲಸ ನಿರ್ವಹಿಸುತ್ತಿರುವ ಅಕ್ಷರ ದಾಸೋಹ ನೌಕರರಿಗೂ ಗೌರವಯುತ ವೇತನ ಮತ್ತು ಸಾಮಾಜಿಕ ಭದ್ರತೆ ದೊರೆಯಬೇಕು ಎಂದು ಪ್ರತಿಪಾದಿಸಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ನಿರುಪಾದಿ ಬೆಣಕಲ್ ಮಾತನಾಡಿ, ಅಕ್ಷರ ದಾಸೋಹ ಮತ್ತು ಬಿಸಿಯೂಟ ನೌಕರರ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತ ಹೋರಾಟ ಅಗತ್ಯವಾಗಿದೆ. ಕಾರ್ಮಿಕರು ತಮ್ಮ ಹಕ್ಕುಗಳು ಮತ್ತು ಬೇಡಿಕೆಗಳ ಕುರಿತು ಜಾಗೃತರಾಗಬೇಕು ಹಾಗೂ ಮುಂದಿನ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಹೇಳಿದರು.

ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಲಕ್ಷ್ಮೀ ಸೋನಾರ ವಹಿಸಿದ್ದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಡಗ್ಗಿ, ಅಕ್ಷರ ದಾಸೋಹ ಬಿಸಿಯೂಟ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷೆ ಈರಮ್ಮ, ಕಾರ್ಯದರ್ಶಿ ನೂರಜಾನ್, ಸಿಐಟಿಯು ಸಂಚಾಲಕ ಮಲ್ಲಪ್ಪ ಮ್ಯಾಗಡೆ, ಪರಶುರಾಮ, ಕರ್ನಾಟಕ ರಾಜ್ಯ ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಜಿಲ್ಲಾ ಸಹ ಕಾರ್ಯದರ್ಶಿ ಬಾಳಪ್ಪ ಹುಲಿಹೈದರ ಇದ್ದರು.

ಬೇವೂರು ಪೊಲೀಸ್ ಠಾಣೆಯ ನೂತನ ಪಿಎಸ್‌ಐ ಆಗಿ ಕಾಳಿಂಗ ಎ. ಅಧಿಕಾರ ಸ್ವೀಕಾರ



ಯಲಬುರ್ಗಾ: ತಾಲೂಕಿನ ಬೇವೂರು ಪೊಲೀಸ್ ಠಾಣೆಯ ನೂತನ ಪಿಎಸ್‌ಐ ಆಗಿ ಕಾಳಿಂಗ ಎ. ಸೋಮವಾರ ಅಧಿಕಾರ ಸ್ವೀಕರಿಸಿದರು. ಹಂಪಿ ಪೊಲೀಸ್ ಠಾಣೆಯಿಂದ ಬೇವೂರು ಠಾಣೆಗೆ ವರ್ಗಾವಣೆಯಾಗಿರುವ ಕಾಳಿಂಗ ಎ. ಅವರು ಈ ಹಿಂದೆ ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದರು.

ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ಠಾಣಾ ವ್ಯಾಪ್ತಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಬೆಳೆಸುವುದು ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸುವುದು ತಮ್ಮ ಆದ್ಯತೆಯಾಗಿದೆ ಎಂದರು.

ಸಾರ್ವಜನಿಕರು ಯಾವುದೇ ಸಮಸ್ಯೆ ಅಥವಾ ದೂರುಗಳಿದ್ದರೆ ನೇರವಾಗಿ ಪೊಲೀಸರ ಗಮನಕ್ಕೆ ತರಬೇಕು.

ಜನರ ಸುರಕ್ಷತೆ ಹಾಗೂ ಶಾಂತಿ ಕಾಪಾಡಲು ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಭೈರಪ್ಪ ಸಾಹಿತ್ಯ ನಿರಂತರ ವಿದ್ಯಮಾನ



ಕೊಪ್ಪಳ: 'ದೇಶದ ಸ್ವಾತಂತ್ರ್ಯ ಹೋರಾಟ, ನೈತಿಕ ಪಾಠ, ಜೀವನ ಮೌಲ್ಯಗಳು ಹೀಗೆ ಪ್ರತಿ ವಿಷಯಕ್ಕೂ ಮಹಾತ್ಮಗಾಂಧಿ ಹೇಗೆ ಆದರ್ಶಪ್ರಾಯರೊ ಹಾಗೆಯೇ ಸಾಹಿತ್ಯ ಕ್ಷೇತ್ರದಲ್ಲಿ ಎಸ್.ಎಲ್. ಭೈರಪ್ಪ ಅವರ ಹೆಸರು ಚಿರಸ್ಥಾಯಿ. ಅವರು ಸಾಹಿತ್ಯದ ನಿರಂತರ ವಿದ್ಯಮಾನ' ಎಂದು ಗವಿಸಿದ್ಧೇಶ್ವರ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಶರಣಬಸಪ್ಪ ಬಿಳಿಎಲೆ ಪ್ರತಿಪಾದಿಸಿದರು.

ದಿವಂಗತ ಎಸ್.ಎಲ್. ಭೈರಪ್ಪ ಅವರ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ ನಗರದಲ್ಲಿ ಶನಿವಾರ ಬೆಂಗಳೂರಿನ ಎಸ್.ಎಲ್. ಭೈರಪ್ಪ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು 'ಅವರ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆಗಳು, ಜಾತಿ ವ್ಯವಸ್ಥೆ, ಸಾಂಸ್ಕೃತಿಕ ಪಲ್ಲಟಗಳ ಚಿತ್ರಣಗಳಿವೆ. ಯಾವ ಪೀಳಿಗೆಯವರು ಓದಿದರೂ ಅವರಿಗೆ ಅನ್ವಯವಾಗುತ್ತವೆ' ಎಂದರು.

ಗಿಣಿಗೇರಾದ ಆನೆಗೊಂದಿ ಮಹಾಸಂಸ್ಥಾನ ಸರಸ್ವತಿ ಪೀಠದ ಅಭಿನವ ಶ್ರೀಕಂಠ ಸ್ವಾಮೀಜಿ ಮಾತನಾಡಿ 'ಭೈರಪ್ಪ ಅವರ ಕಾದಂಬರಿಗಳಿಗೆ ಸಾತ್ವಿಕ, ತಾತ್ವಿಕ ನೆಲೆಯಿದೆ. ಅವರ ಪ್ರತಿ ಕಾದಂಬರಿ ವಿಷಯದ ಆಳಕ್ಕೆ ಇಳಿದ ಮುತ್ತುಗಳಿದ್ದಂತೆ' ಎಂದು ಹೇಳಿದರು.

ಪ್ರಬಂಧ ಸ್ಪರ್ಧೆ: 'ಭೈರಪ್ಪನವರ ಕೃತಿಗಳಲ್ಲಿನ ಮೌಲ್ಯಗಳು' ವಿಷಯದ ಕುರಿತು ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಗೆ 16 ಬರಹಗಳು ಬಂದಿದ್ದವು. ಇದರಲ್ಲಿ ಬಾಳಪ್ಪ ತಳವಾರ ಹಾಗೂ ವಂಶಿ ಕೃಷ್ಣಗೌಳಿ ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದು–ಕೊಂಡರು.

ಶಂಕರಗೌಡ ಪೊಲೀಸ್ ಪಾಟೀಲ, ಪತ್ರಕರ್ತ ಸೋಮಲಿಂಗಪ್ಪ ಬೆಣ್ಣಿ, ಬೊಮ್ಮಣ್ಣ ಅಕ್ಕಸಾಲಿ ಹಾಗೂ ಸಾಕಷ್ಟು ಸಂಖ್ಯೆಯಲ್ಲಿ ಸಾಹಿತ್ಯ ಪ್ರಿಯರು ಪಾಲ್ಗೊಂಡಿದ್ದರು.

ವಡ್ಡರಹಟ್ಟಿ ಕ್ಯಾಂಪ್‌ನಲ್ಲಿ ರಕ್ತದಾನ ಶಿಬಿರ ಆಯೋಜನೆ



ಗಂಗಾವತಿ: ತಾಲ್ಲೂಕಿನ ವಡ್ಡರಹಟ್ಟಿ ಕ್ಯಾಂಪ್‌ನ ಆಂಜನೇಯ ದೇವಸ್ಥಾನದ ಆವರಣದಲ್ಲಿ ಮಹಾತ್ಮಾ ಗಾಂಧಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿ ಜಯಂತಿ ನಿಮಿತ್ತ 'ಒಂದು ಹೆಜ್ಜೆ ಸಹಾಯ ಮತ್ತು ಸಹಕಾರದೆಡೆಗೆ' ಎಂಬ ಧ್ಯೇಯ ವಾಕ್ಯದೊಂದಿಗೆ ಗಂಗಾವತಿ ಅಂಜನಾದ್ರಿ ರಕ್ತ ಭಂಡಾರ ಹಾಗೂ ವಡ್ಡರಹಟ್ಟಿ ಗ್ರಾಮ ಪಂಚಾಯಿತಿಯ ಸಹಯೋಗದಲ್ಲಿ ಶುಕ್ರವಾರ ರಕ್ತದಾನ ಶಿಬಿರ ನಡೆಯಿತು.

ಈ ವೇಳೆ ಗ್ರಾ.ಪಂ ಪಿಡಿಒ ಸುರೇಶ ಚಲವಾದಿ ಮಾತನಾಡಿ, 'ರಕ್ತದಾನ ಅತ್ಯಂತ ಶ್ರೇಷ್ಠ ದಾನವಾಗಿದೆ. ಅಪಘಾತ, ಶಸ್ತ್ರಚಿಕಿತ್ಸೆ ಸೇರಿ ವಿವಿಧ ತುರ್ತು ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಇರುತ್ತದೆ. ಆರೋಗ್ಯವಂತರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಅಗತ್ಯವಿರುವವರ ಜೀವ ಉಳಿಸಲು ಸಹಕರಿಸಬೇಕು. ರಕ್ತದಾನದ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ' ಎಂದರು.

ವಡ್ಡರಹಟ್ಟಿ ಉಪ ಕೇಂದ್ರದ ಪಿಎಚ್‌ಸಿ ಇಒ ಸುವರ್ಣ ಹಿರೇಮಠ, ಸ್ಥಳೀಯರಾದ ಪೀರ್ ಮಹ್ಮದ್, ಕಾಳಿಂಗ ಹತ್ತಿಮರದ, ಅಂಜನಾದ್ರಿ ರಕ್ತ ಬಂಡಾರದ ಜಾಫರ್, ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಗ್ರಾ.ಪಂ ಸಿಬ್ಬಂದಿ ಉಪಸ್ಥಿತರಿದ್ದರು.

PUBLIC FAST KANNADA DAILY NEWS PAPER

ದಿನಾಂಕ : 09–10–2026

ಹುಕ್ಕೇರಿ ತಾಲ್ಲೂಕು ಬರ ಪಟ್ಟಿಗೆ ಸೇರಿಸಲು ಆಗ್ರಹ



ಹುಕ್ಕೇರಿ: ರೈತರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸಬೇಕು, ಹುಕ್ಕೇರಿ ತಾಲ್ಲೂಕನ್ನು ಕೂಡಲೇ ಬರಪೀಡಿತ ಪಟ್ಟಿಗೆ ಸೇರಿಸಬೇಕು ಎಂದು ಆಗ್ರಹಿಸಿ ಶಾಸಕ ನಿಖಿಲ್ ಕತ್ತಿ ಸೋಮವಾರ ಒತ್ತಾಯಿಸಿದರು.

ಪಟ್ಟಣದಲ್ಲಿ ಸೋಮವಾರ ನಡೆದ ಪಕ್ಷಾತೀತ ಹೋರಾಟದಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ದಡ್ಡಿ, ಕಣಗಲಾ ಭಾಗದ 12 ಹಳ್ಳಿ ಹೊರತುಪಡಿಸಿ ಉಳಿದ ಎಲ್ಲಾ ಕಡೆ ಮುಂಗಾರು ಸಂಪೂರ್ಣ ವಿಫಲವಾಗಿದೆ. ಹಿಂಗಾರು ಕೂಡ ಕೈಕೊಟ್ಟಿದ್ದು, ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಕೇವಲ ಹಿಡಕಲ್ ಡ್ಯಾಂ ತುಂಬಿದೆ ಎಂಬ ಕಾರಣ ನೀಡಿ ಹುಕ್ಕೇರಿ ತಾಲ್ಲೂಕನ್ನು ಬರ ಪಟ್ಟಿಯಿಂದ ಕೈಬಿಟ್ಟಿರುವುದು ಸರಿಯಲ್ಲ. ಕೂಡಲೇ ಬೆಳೆ ಸಾಲ ಮನ್ನಾ ಮಾಡಿ, ಸೂಕ್ತ ಬೆಳೆ ಪರಿಹಾರ ನೀಡಿ, ಕುಡಿಯುವ ನೀರಿಗಾದರೂ 7 ಗಂಟೆ ನಿರಂತರ ವಿದ್ಯುತ್ ನೀಡಬೇಕು ಎಂದು ಆಗ್ರಹಿಸಿದರು. ಸರ್ಕಾರ ಸ್ಪಂದಿಸದಿದ್ದರೆ ಮುಂದಿನ ದಿನಮಾನಗಳಲ್ಲಿ ಉಗ್ರ ಹೋರಾಟ ಅನಿವಾರ್ಯ ಎಂದರು.

ಮಾಜಿ ಸಂಸದ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ರಮೇಶ ಕತ್ತಿ ಮಾತನಾಡಿ, ರಾಜ್ಯ ಬರಗಾಲದಲ್ಲಿ ಬೆಂದು ಹೋಗುತ್ತಿದೆ. ರೈತನ ಕೈಗೆ 2,500 ಪರಿಹಾರ ನೀಡುವುದು ಅವಮಾನಕರ. ಈ ಹಿಂದೆ ಕುಮಾರಸ್ವಾಮಿ ಸಾಲಮನ್ನಾ ಮಾಡಿ ರೈತರಿಗೆ ಆಸರೆ ನೀಡಿದ್ದರು. ಕೇಂದ್ರದತ್ತ ಬೆರಳು ತೋರಿಸಿ ಕಾಲಹರಣ ಮಾಡುವುದು ಸರಿಯಲ್ಲ ಎಂದರು.

ರೈತಹಿತರಕ್ಷಣಾ ವೇದಿಕೆ ಅಧ್ಯಕ್ಷ ರಾಮಚಂದ್ರ ಜೋಶಿ, ರಾಜ್ಯ ಬಿಜೆಪಿ ಎಸ್ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬಸವರಾಜ ಹುಂದ್ರಿ, ಮುಖಂಡ ಮಾರುತಿ ಅಷ್ಟಗಿ ಮಾತನಾಡಿದರು.

ಮೆರವಣಿಗೆ: ಶಾಸಕ ನಿಖಿಲ್ ಕತ್ತಿ ನೇತೃತ್ವದಲ್ಲಿ ಪಿಕಾರ್ಡ್ ಬ್ಯಾಂಕ್‌ನಿಂದ ಹೊರಟ ರೈತರ ಮೆರವಣಿಗೆ ಬಸವೇಶ್ವರ ವೃತ್ತದವರೆಗೆ ಬಂದು ಸರ್ಕಾದ ವಿರುದ್ಧ ಘೋಷಣೆ ಮಾಡಿ, ಮಾನವ ಸರಪಳಿ ರಚಿಸಿ ರಸ್ತೆ ಸಂಚಾರಕ್ಕೆ ಕೆಲಕಾಲ ಅಡೆತಡೆ ನಡೆಸಿ ತಹಶೀಲ್ದಾರ್ ಬಲರಾಮ ಕಟ್ಟಿಮನಿ ಅವರಿಗೆ ಮನವಿ ಸಲ್ಲಿಸಲಾಯಿತು.

ಮುಖಂಡರಾದ ಮಹಾವೀರ ನಿಲಜಗಿ, ಎ.ಕೆ.ಪಾಟೀಲ, ಸುನೀಲ ಪರ್ವತರಾವ, ಶಿವಾನಂದ ಮುಡಸಿ, ರೋಹನ ನೇಸರಿ, ಕಲಗೌಡ ಪಾಟೀಲ, ರಾಯಪ್ಪ ಡೂಗ, ಗುರುರಾಜ ಕುಲಕರ್ಣಿ, ಪಿಂಟು ಶೆಟ್ಟಿ, ವಕೀಲರ ಸಂಘದ ಅಧ್ಯಕ್ಷ ಡಿ.ಕೆ. ಅವರಗೋಳ ಇದ್ದರು.

ಸಾರ್ವಜನಿಕರ ಸಮಸ್ಯೆ ತ್ವರಿತವಾಗಿ ಬಗೆಹರಿಸಿ ಸಚಿವ ಸತೀಶ ಜಾರಕಿಹೊಳಿ ಸೂಚನೆ



ಖಾನಾಪುರ: 'ಜನರ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲೇ ಪರಿಹಾರ ಒದಗಿಸುವ ಉದ್ದೇಶದಿಂದ ಪ್ರಜಾಸೇವೆ ಆಂದೋಲನ ನಡೆಸಲಾಗುತ್ತಿದೆ.

ಜನರ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ವಹಿಸಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಸೂಚಿಸಿದರು.

ಇಲ್ಲಿನ ಲೋಕಮಾನ್ಯ ಟಿಳಕ ಭವನದಲ್ಲಿ ಸೋಮವಾರ ನಡೆದ ಪ್ರಜಾಸೇವೆ ಆಂದೋಲನ ಸಭೆಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು.

ಈ ಆಂದೋಲನದ ಮೂಲಕ ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ನೇರವಾಗಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತರಲು ಅವಕಾಶ ಸಿಕ್ಕಿದೆ. ಸರ್ಕಾರದ ಸೇವೆಗಳನ್ನು ಜನರ ಮನೆಬಾಗಿಲಿಗೆ ತಲುಪಿಸಲು ಸಹಕಾರಿಯಾಗಿದೆ. ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸಿ, ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚಿಸುವ ಸಲುವಾಗಿ ಅಧಿಕಾರಿಗಳು ಶಿಸ್ತುಬದ್ಧವಾಗಿ ಕೆಲಸ ಮಾಡಬೇಕು' ಎಂದು ನಿರ್ದೇಶನ ಕೊಟ್ಟರು.

ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್,'ಸ್ಮಶಾನಭೂಮಿ ಮಂಜೂರು, ಶಾಲಾ ಕಟ್ಟಡ ನಿರ್ಮಾಣ, ಅರಣ್ಯ ಇಲಾಖೆ, ಲೋಕೋಪಯೋಗಿ ಇಲಾಖೆ, ಕಂದಾಯ ಇಲಾಖೆಗೆ ಸೇರಿದ ವಿಷಯಗಳು ಸೇರಿ 200 ಅರ್ಜಿ ಸ್ವೀಕೃತವಾಗಿದ್ದು, ಆದ್ಯತೆ ಮೇರೆಗೆ ಪರಿಶೀಲಿಸಿ ನಿಯಮಾನುಸಾರ ವಿಲೇವಾರಿ ಮಾಡಲಾಗುವುದು' ಎಂದರು.

ಈ ಹಿಂದೆ ಯರಗಟ್ಟಿಯಲ್ಲಿ ನಡೆದ ಪ್ರಜಾಸೇವೆ ಆಂದೋಲನದಲ್ಲಿ 250 ಅರ್ಜಿ ಸ್ವೀಕೃತವಾಗಿದ್ದವು. ಈ ಪೈಕಿ ಶೇ 30ರಷ್ಟು ಅರ್ಜಿಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ. ಉಳಿದ ಅರ್ಜಿಗಳನ್ನೂ ಸಂಬಂಧಿಸಿದ ಇಲಾಖೆಗಳ ಮೂಲಕ ತ್ವರಿತವಾಗಿ ಪರಿಶೀಲಿಸಿ ವಿಲೇವಾರಿಗೆ ಸೂಚಿಸಲಾಗಿದೆ' ಎಂದು ತಿಳಿಸಿದರು.

ಶಾಸಕ ವಿಠ್ಠಲ ಹಲಗೇಕರ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸಂಸ್ಥೆಯ ಉಪಾಧ್ಯಕ್ಷ ಸುನೀಲ ಹನುಮಣ್ಣವರ, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಸಮಿತಿ ಅಧ್ಯಕ್ಷ ವಿನಯ ನಾವಲಗಟ್ಟಿ, ಬೆಳಗಾವಿ ಉಪವಿಭಾಗಾಧಿಕಾರಿ ಶ್ರವಣ ನಾಯಕ, ಹೆಚ್ಚುವರಿ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿಗಳಾದ ಬಸವರಾಜ ಹೆಗ್ಗನಾಯಕ, ಬಸವರಾಜ ಅಡವಿಮಠ, ಖಾನಾಪುರ ತಹಶೀಲ್ದಾರ ದುಂಡಪ್ಪ ಕೋಮಾರ, ಕೃಷಿ ಇಲಾಖೆ ಜಂಟಿನಿರ್ದೇಶಕ ಎಚ್.ಡಿ.ಕೋಳೇಕರ, ನಗರಾಭಿವೃದ್ಧಿ ಕೋಶದ ಜಿಲ್ಲಾ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ ಕಲಾದಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಚೇತನಕುಮಾರ ಇದ್ದರು.

ಹಿರೇಬಾಗೇವಾಡಿ ಎಪಿಎಂಸಿಯಲ್ಲಿ ತೂಕದ ಯಂತ್ರ ಉದ್ಘಾಟನೆ



ಹಿರೇಬಾಗೇವಾಡಿ: ಹಿರೇಬಾಗೇವಾಡಿ ಎಪಿಎಂಸಿ ಉಪ ಮಾರುಕಟ್ಟೆಯಲ್ಲಿ 80 ಮೆಟ್ರಿಕ್ ಟನ್ ಸಾಮರ್ಥ್ಯದ ತೂಕದ ಯಂತ್ರ ಉದ್ಘಾಟನೆ ಸಮಾರಂಭ ಸೋಮವಾರ ಜರುಗಿತು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮಾತನಾಡಿ, ರೈತರಿಗೆ ಅನುಕೂಲವಾಗುವ ಉದ್ದೇಶದಿಂದ ಕರ್ನಾಟಕ ಸರ್ಕಾರದಿಂದ ಈ ತೂಕದ ಯಂತ್ರವನ್ನು ಸ್ಥಾಪಿಸಲಾಗಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು. ವಿಶೇಷವಾಗಿ ಕಬ್ಬು ಬೆಳೆಗಾರರಿಗೆ ಈ ತೂಕದ ಯಂತ್ರ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಬೇರೆಡೆ ಕಬ್ಬು ಸೇರಿದಂತೆ ವಿವಿಧ ಬೆಳೆಗಳನ್ನು ತೂಕ ಮಾಡಿಸಲು ಹಣ ಪಾವತಿಸಬೇಕಾಗುತ್ತದೆ. ಆದರೆ ಇಲ್ಲಿನ ಉಪ ಮಾರುಕಟ್ಟೆಯಲ್ಲಿ ರೈತರು ತಾವು ಬೆಳೆದ ಕಬ್ಬು ಸೇರಿದಂತೆ ಇತರೆ ಕೃಷಿ ಉತ್ಪನ್ನಗಳನ್ನು ತುಂಬಿಕೊಂಡು ಬರುವ ಟ್ರ್ಯಾಕ್ಟರ್, ಲಾರಿ ಸೇರಿದಂತೆ ದೊಡ್ಡ ವಾಹನಗಳ ತೂಕವನ್ನು ಒಂದೇ ಸ್ಥಳದಲ್ಲಿ ನಿಖರವಾಗಿ ಅಳೆಯಲು ನೆರವಾಗಲಿದೆ ಎಂದರು

ಎಪಿಎಂಸಿ ಮಾರುಕಟ್ಟೆಯ ಅಧಿಕಾರಿ ವಿಶ್ವನಾಥ ರೆಡ್ಡಿ, ದರ್ಗಾದ ಅಶ್ರಪ ಅಜ್ಜ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಸಿ.ಪಾಟೀಲ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಅಡಿವೇಶ ಇಟಗಿ, ಮುಖಂಡರಾದ ಸುರೇಶ ಇಟಗಿ, ಪ್ರಕಾಶ ಜಪ್ತಿ, ಬಸನಗೌಡ ಪಾಟಿಲ ಇದ್ದರು.

ನೀರು ಮಿತವಾಗಿ ಬಳಸಿ ಮುಂದಿನ ಪೀಳಿಗೆಗೆ ಉಳಿಸಿ: ಅಶೋಕ ಪಟ್ಟಣ



ರಾಮದುರ್ಗ: ಜೀವಜಲ ನೀರು ಅತ್ಯಮೂಲ್ಯವಾಗಿದೆ.

ನೀರನ್ನು ಮಿತವಾಗಿ ಬಳಸಬೇಕು. ಅನಗತ್ಯ ನೀರಿನ ಬಳಕೆ ನಿಲ್ಲಿಸಿ ಮುಂದಿನ ಪೀಳಿಗೆಗೆ ನೀರು ಉಳಿಸುವ ಕಾರ್ಯ ಮಾಡಬೇಕು. ಇಲ್ಲದಿದ್ದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ ಎಂದು ವಿಧಾನ ಸಭೆಯ ಮುಖ್ಯ ಸಚೇತಕ ಅಶೋಕ ಪಟ್ಟಣ ಹೇಳಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಜಲಜೀವನ ಮಿಷನ್ ಯೋಜನೆಯಡಿ, ಕರ್ನಾಟಕ ಸುಸ್ಥಿರ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ ಮತ್ತು ನಿರ್ವಹಣೆ ಸಾಂಸ್ಥಿಕರಣದ ಬಲವರ್ಧನೆಯ ಅಂಗವಾಗಿ ತಾಲ್ಲೂಕಿನ ಕೆಸರಗೊಪ್ಪ ಗ್ರಾಮವನ್ನು 24X7 ನೀರು ಸರಬರಾಜು ಗ್ರಾಮ ಘೋಷಣೆ ಮಾಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಳೆ ಕೊರತೆ ಒಂದೆಡೆ–ಯಾದರೆ, ಅಂತರ್ಜಲ ಕುಸಿತ ಪರಿಣಾಮ ಕುಡಿಯುವ ನೀರು ದೊರೆಯುವುದು ಕಷ್ಟಕರವಾಗಿದೆ. ಪ್ರತಿಯೊಬ್ಬರು ನೀರನ್ನು ಮಿತವಾಗಿ ಬಳಕೆ ಮಾಡಿ ಭವಿಷ್ಯದ ಜನಾಂಗಕ್ಕೆ ನೀರು ಉಳಿಸುವ ಕಾರ್ಯ ಮಾಡಬೇಕು ಎಂದು ಹೇಳಿದರು.

ಅತಿ ಶೀಘ್ರದಲ್ಲಿ ತಾಲ್ಲೂಕಿನ ಪ್ರತಿ ಗ್ರಾಮಕ್ಕೂ ನವಿಲುತೀರ್ಥ ಅಣೆಕಟ್ಟೆಯಿಂದ ಶುದ್ಧ ಕುಡಿಯುವ ನೀರು ಪೂರೈಸುವ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. ಸರ್ಕಾರ ಜನತೆಗೆ ಶುದ್ಧ ಕುಡಿಯುವ ನೀರು ಪೂರೈಕೆಗೆ ಆದ್ಯತೆ ನೀಡಿದೆ. ಉತ್ತಮ ಆರೋಗ್ಯಕ್ಕೆ ಶುದ್ಧ ಕುಡಿಯುವ ನೀರು ಸೇವನೆ ಅಗತ್ಯವಿದೆ ಎಂದರು.ತಾಲ್ಲೂಕು ಉಚಿತ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಅಧ್ಯಕ್ಷ ಜಿ.ಬಿ. ರಂಗನಗೌಡ್ರ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಜಹೂರ ಹಾಜಿ, ಕೆ. ಚಂದರಗಿ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ, ಡಾ.ಗಿರೀಶ ಪಾಟೀಲ, ಪಿಡಿಓ ಬಸವರಾಜ ರಾಯಪ್ಪಗೋಳ, ಪ್ರಕಾಶ ಮುರಕಟ್ನಾಳ ಇದ್ದರು.

ಸವದತ್ತಿ ರೇಣುಕಾ ಯಲ್ಲಮ್ಮ ದೇವಸ್ಥಾನ ಪುಸ್ತಕ ರಚನಾ ಸಮಿತಿಗೆ ಯಾಕೊಳ್ಳಿ ನೇಮಕ



ಸವದತ್ತಿ: ರೇಣುಕಾ ಯಲ್ಲಮ್ಮ ದೇವಸ್ಥಾನದ ಕುರಿತು ಪುಸ್ತಕ (ಕಾಫಿ ಟೇಬಲ್ ಬುಕ್– ದೇವಸ್ಥಾನ ಕುರಿತ ಮಾಹಿತಿ ಕಿರು ಹೊತ್ತಿಗೆ) ರಚನಾ ಸಮಿತಿಗೆ ಇಲ್ಲಿನ ನಿವೃತ್ತ ಪ್ರಾಚಾರ್ಯ ವೈ.ಎಂ. ಯಾಕೊಳ್ಳಿ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಿ ಜಿಲ್ಲಾಧಿಕಾರಿ ಮೊಹ್ಮದ ರೋಷನ್ ಆದೇಶ ಹೊರಡಿಸಿದ್ದಾರೆ.ರೇಣುಕಾ ಯಲ್ಲಮ್ಮ ದೇವಿಗೆ ಸಂಬಂಧಿಸಿದ ಪುರಾಣ, ನಂಬಿಕೆಗಳು, ಶತಮಾನಗಳ ಇತಿಹಾಸ, ಪೂಜಾ ಪದ್ಧತಿಗಳು, ಜಾತ್ರೆ ಮತ್ತು ಜನಪದ ಸಂಪ್ರದಾಯಗಳು ಕ್ಷೇತ್ರದ ವೈಶಿಷ್ಟ್ಯವನ್ನು ಹೆಚ್ಚಿಸಿವೆ. ದೇವಸ್ಥಾನದ ಇತಿಹಾಸದಿಂದ ವಾಸ್ತುಶಿಲ್ಪದವರೆಗೆ, ಪೂಜೆ–ಆಚರಣೆಗಳಿಂದ ಜಾತ್ರೆಯವರೆಗೆ, ಭಕ್ತರ ನಂಬಿಕೆಯಿಂದ ಕ್ಷೇತ್ರದ ಸುತ್ತಲಿನ ಸಾಂಸ್ಕೃತಿಕ ಬದುಕಿನವರೆಗೆ ಎಲ್ಲವನ್ನೂ ಒಂದೇ ಪುಸ್ತಕದಲ್ಲಿ ಕಟ್ಟಿಕೊಡುವ ಉದ್ದೇಶದ ಸಮಿತಿ ಇದಾಗಿದೆ. 'ಕಾಫಿ ಟೇಬಲ್ ಪುಸ್ತಕ' ವನ್ನು ಹೊರತರಲು ಸರ್ಕಾರದ ಉದ್ದೇಶಿಸಿ ಎಂದು ಪ್ರಕಟಣೆ ತಿಳಿಸಿದೆ.

ರಾಂಪೂರಿನಲ್ಲಿ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ



ಬಾಗಲಕೋಟೆ : ಪ್ರಧಾನಿ ನರೇಂದ್ರ ಮೋದಿಯವರ 25 ವರ್ಷಗಳ ಸಾರ್ವಜನಿಕ ಸೇವೆ ಹಾಗೂ ಉತ್ತಮ ಆಡಳಿತದ ಅಂಗವಾಗಿ ಭಾರತೀಯ ಜನತಾ ಪಕ್ಷದ ವಿಧಾನಸಭಾ ಮತಕ್ಷೇತ್ರ ಗ್ರಾಮೀಣ ಮಂಡಲವತಿ ಬಾಗಲಕೋಟೆ ಹಾಗೂ ಎಸ್. ನಿಜಲಿಂಗಪ್ಪ ಮೆಡಿಕಲ್ ಕಾಲೇಜು ಮತ್ತು ಶ್ರೀ ಹಾನಗಲ್ ಕುಮಾರೇಶ್ವರ ಆಸ್ಪತ್ರೆಯ ಸಹಯೋಗದಲ್ಲಿ ರಾಂಪೂರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸೋಮವಾರ ನಡೆಸಡ 'ಸೇವಾ ಸಂಕಲ್ಪ ಅಭಿಯಾನ' ನಿಮಿತ್ಯ ಉಚಿತ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರ ಜರುಗಿತು.

ವೈದ್ಯರಾದ ಡಾ.ಸಮೀರಕುಮಾರ ಕುಲಕರ್ಣಿ, ಡಾ.ಕೀರಣ ಬಿಜಾಪುರ, ಡಾ.ವಿಠ್ಠಲ ಕುಂಬಾರ, ಡಾ.ಜ್ಯೋತಿ ಉಳಿಗೇರ, ಡಾ.ವಿಶ್ವನಾಥ ಸೇರಿದಂತೆ ಅನೇಕ ವೈದ್ದರು ಸಿಬ್ಬಂದಿ ಜನರ ಆರೋಗ್ಯ ತಪಾಸಣೆ ನಡೆಸುವ ಮೂಲಕ ಸೇವೆ ಸಲ್ಲಿಸಿದರು,

ಶಿಬಿರದಲ್ಲಿ 300 ಕ್ಕೂ ಹೆಚ್ಚು ಜನ ಭಾವಹಿಸಿದ್ದರು, ಶಿಬಿರದಲ್ಲಿ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಿ, ಅಗತ್ಯ ವೈದ್ಯಕೀಯ ಸಲಹೆಗಳನ್ನು ನೀಡಲಾಯಿತು, ಇದರ ಜೊತೆಗೆ ರಕ್ತದಾನ ಶಿಬಿರವೂ ನಡೆಯಿತು

ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣೂರ, ಮಹಾದೇವ ಹರ್ಜನ್, ಅಪ್ಪಾಜಿ ಜೋಳದ, ಮುದಕಣ್ಣ ಒಡೆಯರ, ದುಂಡೇಶ ಕೊಣ್ಣೂರ, ಮಳರಸ್ವಾಮಿ ವಂದಾಲ, ರವಿ ಹಕಾರ, ದುಂಡೇಶ ಕೊಣ್ಣೂರ, ಗ್ಯಾನಪ್ಪ ಕಾಳಗಿ, ಪಾನಪ್ಪ ವಡ್ಡರ, ಪರಶು ಕಂಬಾರ, ಸಂಗಮೇಶ ಮಂಕಣಿ ಸೇರಿದಂತೆ ಅನೇಕರು ಭಾಗವಹಿಸಿದ್ದರು,

ಬಿ.ವಿ.ವಿ.ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ

ವೈಜ್ಞಾನಿಕ ಚಿಂತನೆಯ ಮೂಲಕ ಜ್ಞಾನವನ್ನು ಸಮಾಜದ ಅಭಿವೃದ್ಧಿಗೆ ಬಳಸಿ: ಡಾ. ಎಂ.ವೈ. ಕರಿದುರ್ಗನವರ



ಬಾಗಲಕೋಟೆ : ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ, ಸಂಶೋಧನಾ ಮನೋಭಾವ ಹಾಗೂ ಸಮಾಜಮುಖಿ ದೃಷ್ಟಿಕೋನ ಬೆಳೆಸುವ ಮೂಲಕ ಜ್ಞಾನವನ್ನು ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳುವ ವಾತಾವರಣ ನಿರ್ಮಿಸಬೇಕು ಎಂದು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ ರಸಾಯನಶಾಸ್ತ್ರ ವಿಭಾಗದ ನಿವೃತ್ತ ಹಿರಿಯ ಪ್ರಾಧ್ಯಾಪಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಮಾಜಿ ಡೀನ್ ಡಾ. ಎಂ.ವೈ. ಕರಿದುರ್ಗನವರ ಹೇಳಿದರು.

ನಗರದ ಬಿ.ವಿ.ವಿ.ಎಸ್. ಸಜ್ಜಲಶ್ರೀ ನರ್ಸಿಂಗ್ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ ಬಿ.ವಿ.ವಿ. ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿದ್ದ 'ಸುಸ್ಥಿರ ಭವಿಷ್ಯಕ್ಕಾಗಿ ಅಂತರಶಿಸ್ತೀಯ ವಿಜ್ಞಾನಗಳಲ್ಲಿ ಇತ್ತೀಚಿನ ಪ್ರಗತಿ' ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸುಸ್ಥಿರ ಭವಿಷ್ಯ ನಿರ್ಮಾಣಕ್ಕೆ ವಿಜ್ಞಾನದ ವಿವಿಧ ವಿಭಾಗಗಳ ಜ್ಞಾನವನ್ನು ಸಮನ್ವಯಗೊಳಿಸುವುದು ಅತ್ಯಗತ್ಯ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಆಗುತ್ತಿರುವ ಹೊಸ ಬೆಳವಣಿಗೆಗಳನ್ನು ಸಮಾಜದ ಒಳಿತಿಗಾಗಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಅಂತರಶಿಸ್ತೀಯ ಸಂಶೋಧನೆಗಳು ಮಹತ್ವದ ಪಾತ್ರ ವಹಿಸುತ್ತವೆ, ಐತಿಹಾಸಿಕ ಸಾಹಿತ್ಯಿಕ ಹಿನ್ನೆಲೆಯೊಂದಿಗೆ ಬೋಧಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸಾಧನೆಯ ಮನೋಭಾವ ಬೆಳೆಸಬೇಕು. ಜ್ಞಾನಾರ್ಜನೆಯು ವಿದ್ಯಾರ್ಥಿಗಳಲ್ಲಿ ಸಂತೋಷ, ಆತ್ಮವಿಶ್ವಾಸ ಹಾಗೂ ಸೃಜನಶೀಲತೆಯನ್ನು ಮೂಡಿಸುವಂತಿರಬೇಕು. ಶಿಕ್ಷಕರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪ್ರಮುಖ ಮಾರ್ಗ ದರ್ಶಕರಾಗಿದ್ದು, ಅವರ ಪರಿಶ್ರಮ ಮತ್ತು ಮಾರ್ಗದರ್ಶನವನ್ನು ವಿದ್ಯಾರ್ಥಿಗಳು ಗೌರವಿಸಬೇಕು ಎಂದು ಹೇಳಿದರು.

ಗುರು–ಶಿಷ್ಯ ಪರಂಪರೆಗೆ ಮಹತ್ವ

ಬಿ.ವಿ.ವಿ. ಸಂಘದ ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಜಿ.ಎಸ್. ಸೂಳಿಭಾವಿ ಮಾತನಾಡಿ, ಉತ್ತಮ ಶಿಕ್ಷಕರಾಗಲು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಗುರು–ಶಿಷ್ಯ ಪರಂಪರೆಯ ಅರಿವು ಮುಖ್ಯ. 'ಮಾಸ್ಟರ್', 'ಸರ್' ಎನ್ನುವುದಕ್ಕಿಂತ 'ಗುರು' ಎಂಬ ಪದಕ್ಕೆ ಹೆಚ್ಚಿನ ಮಹತ್ವವಿದೆ. ಬಿ.ವಿ.ವಿ. ಸಂಘದ ವಿದ್ಯಾರ್ಥಿಗಳು ದೇಶ–ವಿದೇಶಗಳಲ್ಲಿ ಉನ್ನತ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದಕ್ಕೆ ಇಲ್ಲಿನ ಶಿಕ್ಷಕರು ನೀಡಿದ ಗುಣಮಟ್ಟದ ಶಿಕ್ಷಣವೇ ಪ್ರಮುಖ ಕಾರಣ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿ.ವಿ.ವಿ. ಸಂಘದ ಗೌರವ ಕಾರ್ಯದರ್ಶಿ ಮಹೇಶ ಎನ್. ಅಥಣಿ ಮಾತನಾಡಿ, ಇಂದಿನ ವಿದ್ಯಾರ್ಥಿಗಳಲ್ಲಿ ಜ್ಞಾನದ ಹಸಿವು ಹಾಗೂ ಸಮಯ ಪಾಲನೆ ಅತ್ಯಂತ ಮುಖ್ಯ. ವಿದ್ಯಾರ್ಥಿಗಳು ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ವೇದಿಕೆಯಲ್ಲಿ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯೆ ಎಸ್. ಆರ್. ದೇಶಪಾಂಡೆ ಹಾಗೂ ಐಕ್ಯೂಎಸಿ ಸಂಯೋಜಕ ಡಾ. ಡಿ.ಎಸ್. ಲಮಾಣಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕಾಲೇಜು ಆಡಳಿತ ಮಂಡಳಿ ಸದಸ್ಯರಾದ ಶರಣಬಸವರಾಜ ನಾವಲಗಿ, ಡಾ.ಎಸ್.ಎಮ್.ಗಾಂವಕರ್, ಡಾ. ಎನ್.ಎಚ್.ಬೇವಿನಹಳ್ಳಿ, ಡಾ. ಟಿ.ಆರ್. ಶಿವಮೂರ್ತಿ, ವಿ.ಹುಶೇನಪ್ಪ, ಡಾ.ವಿ.ಎಸ್. ಕಟ್ಟಿಮನಿ, ಡಾ. ವಿ.ಎಸ್. ಹೇಗಡೆ, ಡಾ. ಎಮ್.ಬಿ.ಪಾಟೀಲ, ಡಾ.ಮಹಾನಂದಮಠ, ಶಿವಾನಂದ ಶಿವನಗುತ್ತಿ ಸೇರಿದಂತೆ ವಿವಿಧ ಮಹಾವಿದ್ಯಾಲಯಗಳ ಪ್ರಾಚಾರ್ಯರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಾಲ್ಕು ತಾಂತ್ರಿಕ ಗೋಷ್ಠಿಗಳು : ವಿಚಾರ ಸಂಕಿರಣದಲ್ಲಿ ನಾಲ್ಕು ತಾಂತ್ರಿಕ ಗೋಷ್ಠಿಗಳು ನಡೆದವು. ಮೊದಲ ಗೋಷ್ಠಿಯಲ್ಲಿ 'ಪಾಲಿಮೆರಿಕ್ ಸೆಕೆಂಡ್ ಆರ್ಡರ್ ನಾನ್‌ಲಿನಿಯರ್ ಆಪ್ಟಿಕಲ್ (ಓಐಐ) ಮೆಟೀರಿಯಲ್ಸ್‌ಗಳ ಅಭಿವೃದ್ಧಿ' ಕುರಿತು ಡಾ. ಎಂ.ವೈ. ಕರಿದುರ್ಗನವರ ಉಪನ್ಯಾಸ ನೀಡಿದರು. ಪಾಲಿಮರ್‌ಗಳು ವಿದ್ಯುತ್ ನಿರೋಧಕಗಳೆಂಬ ಸಾಮಾನ್ಯ ನಂಬಿಕೆಗೆ ವಿರುದ್ಧವಾಗಿ ಕೆಲವು ಪಾಲಿಮರ್‌ಗಳು ವಿದ್ಯುತ್ ವಾಹಕಗಳಾಗಬಲ್ಲವು ಎಂಬ ಸಂಶೋಧನೆಗಳ ಕುರಿತು ಅವರು ವಿವರಿಸಿದರು.

ಎರಡನೇ ಗೋಷ್ಠಿಯಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಭೌತಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಕೊಟ್ರೇಶ್ ಎಂ.ಜಿ. ಅವರು 'ಶುದ್ಧ ನೀರಿಗಾಗಿ ನ್ಯಾನೊ ವಿಜ್ಞಾನ: ಸುಸ್ಥಿರತೆಗಾಗಿ ಫೋಟೋಪ್ರೇರಿತ ವೇಗವರ್ಧನೆ' ವಿಷಯ ಮಂಡಿಸಿದರು.

ಮೂರನೇ ಗೋಷ್ಠಿಯಲ್ಲಿ ಮಹಾರಾಷ್ಟ್ರದ ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಕೈಲಾಸ್ ಡಿ. ಸೋನೆವಾಣೆ ಅವರು 'ಪ್ರತಿಜೀವಿಕ ಪ್ರತಿರೋಧ:ಜಾಗತಿಕ ಆರೋಗ್ಯ ಸಮಸ್ಯೆ' ಕುರಿತು ಉಪನ್ಯಾಸ ನೀಡಿದರು. ನಾಲ್ಕನೇ ಗೋಷ್ಠಿಯಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯದ ಗಣಿತಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹಾಗೂ ಸಿಡಿಸಿ ನಿರ್ದೇಶಕ ಡಾ. ಎನ್.ಬಿ. ನಡುವಿನಮನಿ ಅವರು 'ಸುಸ್ಥಿರ ಇಂಜಿನಿಯರಿಂಗ್‌ನಲ್ಲಿ ಮೇಲ್ಮೈ ಒರುಟುತನ ಮತ್ತು ಬೇರಿಂಗ್ ಕಾರ್ಯಕ್ಷಮತೆ' ಕುರಿತು ವಿಷಯ ಮಂಡಿಸಿದರು.

ಬಿಜೆಪಿಯಿಂದ ಕುತಂತ್ರ ರಾಜಕಾರಣ: ವಿಜಯಾನಂದ ಕಾಶಪ್ಪನವರ ಆರೋಪ



ಹುನಗುಂದ : 'ಬಿಜೆಪಿ ಅವರು ಕುತಂತ್ರ ರಾಜಕಾರಣ ಮಾಡುತ್ತಿದ್ದಾರೆ. ತಮ್ಮ ಅಸ್ತಿತ್ವಕ್ಕಾಗಿ ಪಾದಯಾತ್ರೆ, ಪ್ರತಿಭಟನೆಗಳಂತಹ ನಾಟಕ ಮಾಡುತ್ತಿದೆ' ಎಂದು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ವಿಜಯಾನಂದ ಕಾಶಪ್ಪನವರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಚುನಾವಣೆ ಆಯೋಗದ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಉಂಟಾಗಿದೆ. ಯಾರು? ಕಳ್ಳರು ಎನ್ನುವುದು ಜನರಿಗೆ ಗೊತ್ತಿದೆ. ಬೇರೆ ರಾಜ್ಯದಲ್ಲಿ ಮತದಾರರನ್ನು ಡಿಲೀಟ್ ಮಾಡಿದಂತೆ ನಮ್ಮ ರಾಜ್ಯದಲ್ಲೂ ಮತದಾರರ ಡಿಲೀಟ್ ಮಾಡಲು ಪ್ರಯತ್ನಿಸಿದರು. ಈಗ ನಾವು ಎಚ್ಚೆತ್ತುಕೊಂಡಿದ್ದೇವೆ. ಇಷ್ಟುದಿನ ಧರ್ಮಾಧಾರಿತ, ಮತ್ತೆ ರಾಮಮಂದಿರ ಈಗ ಎಸ್‌ಐಆರ್ ಮೂಲಕ ದೇಶದಲ್ಲಿ ಅಧಿಕಾರಕ್ಕೆ ಬರಬೇಕು ಎಂದು ಬಿಜೆಪಿಯವರು ತಂತ್ರ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿದರು.

'ದಕ್ಷಿಣ ಭಾರತದಲ್ಲಿ ಗೆಲುವು ಸಾಧ್ಯವಿಲ್ಲ ಎಂದು ಅರಿತ ಬಿಜೆಪಿ ಹಿಂಬಾಗಿಲಿನಿಂದ ಚುನಾವಣೆ ಗೆಲ್ಲಲು ಪ್ರಯತ್ನಿಸುತ್ತಿದೆ. ಮತದಾರರ ಹೆಸರು ಡಿಲೀಟ್ ಮಾಡಲು 24 ಸಾವಿರ ಫಾರಂ ಕೊಡಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಹೇಳುತ್ತಾರೆ. ಇವರಿಗೆ ಫಾರಂ ಹಂಚಿಕೆ ಕುರಿತಿ ಹೇಗೆ ಗೊತ್ತು? ಒಂದೊಂದು ಮತಕ್ಷೇತ್ರದಲ್ಲಿ 10ರಿಂದ 15 ಸಾವಿರ ಮತದಾರರ ಹೆಸರು ಡಿಲೀಟ್ ಮಾಡಲು ಹೇಳಿದ್ದಾರೆ. ಅದರಲ್ಲೂ ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ದಲಿತರೇ ಇದ್ದಾರೆ' ಎಂದರು.

'ಎಸ್‌ಐಆರ್ ಅಲ್ಲಿ ತಪ್ಪು ಕಂಡುಬಂದಾಗ ಉತ್ತರ ನೀಡದೇ ಓಡಿ ಹೋಗಿದ್ದಾರೆ. ತಾಳ, ತಂತಿಯಿಲ್ಲದೇ ಸುಮ್ಮನೆ ಮಾತನಾಡುವ ಆ ಮನುಷ್ಯನ ಬಗ್ಗೆ ಏನು ಮಾತನಾಡಬೇಕು? ಸಾಬ್ರು ಬುರ್ಖಾ ಹಾಕುತ್ತಾರೆ ಎಂದೆಲ್ಲ ವೇಷಭೂಷಣದ ಕುರಿತು ಮಾತನಾಡುತ್ತಾರೆ. ತಾವ್ಯಾಕೆ ಕೋಟು, ಕೇಸರಿ ಶಾಲು ಹಾಕುತ್ತಾರೆ ಎಂದು ಪ್ರಶ್ನಿಸಿದರೆ ಏನು ಉತ್ತರಿಸುತ್ತಾರೆ. ಅವರವರ ವೇಷಭೂಷಣ ಅವರ ಆಯ್ಕೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ವಾಗ್ದಾಳಿ ನಡೆಸಿದರು.

2.75 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಶಾಸಕ ಮೇಟಿ ಭೂಮಿಪೂಜೆ



ಬಾಗಲಕೋಟೆ : ಬಾಗಲಕೋಟೆ ಮತಕ್ಷೇತ್ರದ ವಿವಿಧ ಗ್ರಾಮಗಳಲ್ಲಿ 2.75 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವ ಸಾರ್ವಜನಿಕ ಸಮುದಾಯ ಭವನಗಳ ಕಾಮಗಾರಿಗಳಿಗೆ ಶಾಸಕ ಉಮೇಶ ಮೇಟಿ ಭಾನುವಾರ ಭೂಮಿಪೂಜೆ ನೆರವೇರಿಸಿದರು.

2025–26ನೇ ಸಾಲಿನ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಸಾರ್ವಜನಿಕ ಸಮುದಾಯ ಭವನಗಳು, ಕೆಲವೆಡೆ ರಸ್ತೆ ಡಾಂಬರೀಕರಣ ಕಾಮಗಾರಿ ಮತ್ತು 15ನೇ ಹಣಕಾಸು ಯೋಜನೆಯಡಿ ಮುಗಳೊಳ್ಳಿ ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿಗೂ ಶಾಸಕ ಉಮೇಶ ಮೇಟಿ ಚಾಲನೆ ನೀಡಿದರು.

'ಮತಕ್ಷೇತ್ರದಲ್ಲಿ ಸಾರ್ವಜನಿಕರ ಅಗತ್ಯಕ್ಕೆ ಅನುಗುಣವಾಗಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರತಿ ಕಾಮಗಾರಿ ನಡೆಯುವಾಗ ಅಧಿಕಾರಿಗಳು ನಿಗಾ ವಹಿಸಬೇಕು. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಯ ಜೊತೆ ಸರ್ಕಾರದ ಮಾನದಂಡದಂತೆ ಕಾಮಗಾರಿ ನಿರ್ವಹಿಸಬೇಕು. ಕಳಪೆ ಕಾಮಗಾರಿ ನಡೆಸಬಾರದು' ಎಂದು ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಸವಂತಪ್ಪ ಮೇಟಿ, ಶಿವಾನಂದ ಅಬ್ದುಲಪೂರ, ಮುದುಕಪ್ಪ ಕೊಣ್ಣೂರ, ಎಂ.ಆರ್.ಅಂಗಡಿ, ನಿಂಗಣ್ಣ ಕೋಟಿ, ದ್ಯಾಮಣ್ಣ ಗಾಳಿ, ಅಕ್ಬರ್ ಮುಲ್ಲಾ, ಲಕ್ಷ್ಮಣ ದಡ್ಡಿ, ಮುತ್ತಣ್ಣ ಪಟ್ಟಣದ, ಹನಮಂತ ಬಳಿಗಾರ, ಶ್ರೀಕರ ದೇಸಾಯಿ ಇದ್ದರು.

Printed by Published by ASHWARYA PALLATE on behalf of ASHWARYA PALLATE, Printed at DHARIDEEPA PRINTERS & PUBLISHERS, NO. 74, 4TH MAIN, 7TH CROSS NEAR CHOWDESHWARI TEMPLE, KAVERINAGAR, MAHADEVAPURA, BENGALURU, KARNATAKA - 560048. and Published at BASAVESHWAR CIRCLE, 4TH CROSS, NEKAR NAGAR, HUBLI, OLD HUBLI, DHARWAD, KARNATAKA - 580024. Editor ASHWARYA PALLATE